ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 172 RNI Number : KNKAN/25/A2770 30-06-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :172 ರಾಯಚೂರು 30-06-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ಶೀಘ್ರದಲ್ಲೇ ಕೇಂದ್ರ ಸಚಿವ ಸಂಪುಟದಲ್ಲಿ ಮಹತ್ವದ ಬದಲಾವಣೆ ಸಾಧ್ಯತೆ

ನವದೆಹಲಿ: ಕೇಂದ್ರ ಸಚಿವ ಸಂಪುಟದಲ್ಲಿ ಬದಲಾವಣೆಗಳಾಗುವ ಕುರಿತು ಊಹಾಪೋಹಗಳು ಜೋರಾಗಿ ಹರಿದಾಡುತ್ತಿವೆ. ಇಂತಹ ಮಹತ್ವದ ವಿಚಾರಗಳಲ್ಲಿ ಕೊನೆಯ ಕ್ಷಣಗಳವರೆಗೂ ಗೌಪ್ಯತೆ ಕಾಯ್ದುಕೊಳ್ಳುವುದು ಪ್ರಧಾನಿ ನರೇಂದ್ರ ಮೋದಿಯವರ ವಿಶೇಷತೆ ಎಂಬುದು ಎಲ್ಲರಿಗೂ ಗೊತ್ತಿರುವಂಥದ್ದೇ. ಆದರೆ, ಸಂಸತ್ತಿನ ಮಳೆಗಾಲದ ಅಧಿವೇಶನಕ್ಕೂ ಮುನ್ನ ಯಾವುದೇ ಕ್ಷಣಗಳಲ್ಲಿ ಸಂಪುಟ ಪುನರ್ ರಚನೆ ಆಗಬಹುದು ಎನ್ನುತ್ತಿವೆ ವಿಶ್ವಸನೀಯ ಮೂಲಗಳು.

ತೃಣಮೂಲ ಕಾಂಗ್ರೆಸ್(ಟಿಎಂಸಿ) ಮತ್ತು ಶಿವಸೇನೆ (ಉದ್ಧವ್ ಠಾಕ್ರೆ ಬಣ)ಯಂತಹ ಪಕ್ಷಗಳಿಂದ ಬೇರ್ಪಟ್ಟ ಸಂಸದರು ಪ್ರತ್ಯೇಕ ಬಣಗಳನ್ನು ರಚಿಸಿಕೊಂಡಿದ್ದಾರೆ. ಕೇಂದ್ರ ಸಂಪುಟದಲ್ಲಿ ಖಾಲಿ ಇರುವ ಮತ್ತು ಶೀಘ್ರದಲ್ಲೇ ಖಾಲಿಯಾಗುವ ಸ್ಥಾನಗಳಿಗೆ ಇವರಲ್ಲಿ ಕೆಲವರಿಗೆ ಅವಕಾಶ ಸಿಗುವ ಸಾಧ್ಯತೆ ದಟ್ಟವಾಗಿದೆ.

ಬಿಜೆಪಿಯ ಹೊಸ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರು ತಮ್ಮ ತಂಡದ ಪ್ರಮುಖ ಹುದ್ದೆಗಳನ್ನು ಕೆಲವು ಯುವ ನಾಯಕರಿಗೆ ಹಸ್ತಾಂತರಿಸಬಹುದು. ಈ ನಿಟ್ಟಿನಲ್ಲಿ ಪಕ್ಷದ ಹುದ್ದೆಗಳ ಪಟ್ಟಿ ಬಹುತೇಕ ಅಂತಿಮಗೊಂಡಿದೆ ಎಂಬ ಮಾಹಿತಿಯೂ ಲಭ್ಯವಾಗಿದೆ. ನಬಿನ್ ಕೆಲ ದಿನಗಳ ಹಿಂದಷ್ಟೇ ಕೆಲವು ಕೇಂದ್ರ ಸಚಿವರೊಂದಿಗೆ ಚರ್ಚೆ ನಡೆಸಿದ್ದರು. ಇದರೊಂದಿಗೆ ಹೊಸ ಸಚಿವರನ್ನು ನೇಮಿಸಿಕೊಳ್ಳುವ ಮತ್ತು ಕೆಲವರನ್ನು ಬದಲಿಸುವ ಸ್ಪಷ್ಟ ಸೂಚನೆಗಳು ಸಿಕ್ಕಿವೆ.

ಸದ್ಯ ವಿದೇಶ ಪ್ರವಾಸದಿಂದ ವಾಪಸ್ ಆಗುತ್ತಿರುವ ಪ್ರಧಾನಿ ಮೋದಿ ಜುಲೈ 6ರಿಂದ 11 ರವರೆಗೆ ಮತ್ತೆ ವಿದೇಶಕ್ಕೆ ಭೇಟಿ ನೀಡಲಿದ್ದಾರೆ. ಇದರ ನಡುವೆ ಜಪಾನ್ ಪ್ರಧಾನಿ ಸನೇ ತಕೈಚಿ ಅವರು ಜುಲೈ 1ರಿಂದ 3 ರವರೆಗೆ ಭಾರತಕ್ಕೆ ಆಗಮಿಸಲಿದ್ದಾರೆ. ಆದ್ದರಿಂದ, ಪ್ರಧಾನಿಯ ಅನುಕೂಲಕ್ಕೆ ಅನುಗುಣವಾಗಿ ಸಚಿವ ಸಂಪುಟದಲ್ಲಿ ಬದಲಾವಣೆ ಮಾಡುವ ಕುರಿತು ನಿರ್ಧಾರವಾಗುವ ಸೂಚನೆಗಳು ದೊರೆತಿವೆ.

ಪಶ್ಚಿಮ ಬಂಗಾಳದ ಕೆಲವು ಸಂಸದರನ್ನು ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಲಾಗುತ್ತದೆ ಎಂಬ ಮಾಹಿತಿಯೂ ಇದೆ. ಮಹಾರಾಷ್ಟ್ರದಲ್ಲಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನಾ ಪಕ್ಷದ ಹಿರಿಯ ನಾಯಕರೊಬ್ಬರಿಗೆ ಮಂತ್ರಿಗಿರಿ ಸಿಗುವ ಸಾಧ್ಯತೆ ಇದೆ. ಆದರೆ ತೃಣಮೂಲ ಕಾಂಗ್ರೆಸ್ ಪಕ್ಷ, ಶಿವಸೇನೆ (ಯುಬಿಟಿ) ಮುಂತಾದ ವಿಭಜನೆಯಾದ ಯಾವುದೇ ಬಣಗಳಿಗೆ ಅವಕಾಶ ನೀಡುವ ಮೊದಲು ಸ್ಪೀಕರ್ ನಿರ್ಧಾರವೂ ನಿರ್ಣಾಯಕವಾಗುತ್ತದೆ.

ಕರ್ನಾಟಕದ ರಾಜ್ಯಪಾಲ ಥಾವರ್‌ಚಂದ್ ಗಹ್ಲೋಟ್, ಮಧ್ಯಪ್ರದೇಶದ ರಾಜ್ಯಪಾಲ ಮಂಗುಭಾಯಿ ಪಟೇಲ್ ಮತ್ತು ಉತ್ತರಾಖಂಡದ ರಾಜ್ಯಪಾಲ ಗುರ್ಮೀತ್ ಸಿಂಗ್ ಅವರ ಅವಧಿ ಶೀಘ್ರದಲ್ಲೇ ಕೊನೆಗೊಳ್ಳಲಿದೆ. ಪ್ರಸ್ತುತ ಸಚಿವರಲ್ಲಿ ಕೆಲವರನ್ನು ಇವರ ಸ್ಥಾನಗಳಿಗೆ ಕಳುಹಿಸುವ ಸಾಧ್ಯತೆ ಇದೆ. ಸಂಪುಟದಲ್ಲಿ ಯುವ ಶಕ್ತಿ ಮಣೆ ಹಾಕುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ ಎನ್ನುತ್ತಿವೆ ಮೂಲಗಳು.

ಆಮ್ ಆದ್ಮಿ ಪಕ್ಷದಿಂದ(ಎಎಪಿ) ಹೊರಬಂದು ಬಿಜೆಪಿ ಸೇರಿದ 7 ರಾಜ್ಯಸಭಾ ಸದಸ್ಯರಲ್ಲಿ ಒಬ್ಬರು ಅಥವಾ ಇಬ್ಬರು ಸಂಪುಟ ವಿಸ್ತರಣೆಯಲ್ಲಿ ಸ್ಥಾನ ಪಡೆಯುವ ಸಾಧ್ಯತೆ ದಟ್ಟವಾಗಿದೆ.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ, ಸಿಬಿಎಸ್‌ಇ ಡಿಜಿಟಲ್ ಮೌಲ್ಯಮಾಪನ ಪ್ರಮಾದಗಳ ನಂತರ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ಭವಿಷ್ಯವೂ ಡೋಲಾಯಮಾನವಾಗಿದೆ. ಕೇಂದ್ರ ಸಚಿವರಾದ ಹರ್ದೀಪ್ ಸಿಂಗ್ ಪುರಿ ಮತ್ತು ಬಿ.ಎಲ್.ವರ್ಮಾ ಅವರು ನವೆಂಬರ್‌ನಲ್ಲಿ ರಾಜ್ಯಸಭಾ ಸದಸ್ಯರಾಗಿ ಅಧಿಕಾರವಧಿ ಕೊನೆಗೊಳ್ಳುವವರಲ್ಲಿ ಸೇರಿದ್ದಾರೆ. ಇವರಿಗೆ ಮತ್ತೊಂದು ಅವಕಾಶ ಸಿಗುತ್ತದೆಯೇ ಇಲ್ಲವೇ ಎಂಬುದನ್ನು ಕಾದು ನೋಡಬೇಕು.

ಪಂಕಜ್ ಚೌಧರಿ ಮತ್ತು ಹರ್ಷ್ ಮಲ್ಹೋತ್ರಾ ಅವರಿಗೆ ಪಕ್ಷದ ಯುಪಿ ಮತ್ತು ದೆಹಲಿ ರಾಜ್ಯಗಳ ಜವಾಬ್ದಾರಿ ವಹಿಸಲಾಗಿದೆ. ಒಬ್ಬರಿಗೆ ಒಂದು ಹುದ್ದೆ ಎಂಬ ಬಿಜೆಪಿಯ ನಿಯಮದಡಿ ಇಬ್ಬರನ್ನೂ ಸಂಪುಟದಿಂದ ತೆಗೆದುಹಾಕುವ ಸಾಧ್ಯತೆಗಳೂ ಇವೆ.

ಜಾರ್ಜ್ ಕುರಿಯನ್ ಮತ್ತು ರವನೀತ್ ಸಿಂಗ್ ಬಿಟ್ಟು ಅವರ ರಾಜ್ಯಸಭಾ ಅವಧಿ ಈ ತಿಂಗಳ 21ರಂದು ಕೊನೆಗೊಂಡಿತ್ತು. ಕುರಿಯನ್ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಪಂಜಾಬ್ ಚುನಾವಣೆಯತ್ತ ಗಮನಹರಿಸುವಂತೆ ಪಕ್ಷ ಬಿಟ್ಟು ಅವರಿಗೆ ಸಲಹೆ ನೀಡಿದೆ ಎಂದು ವರದಿಯಾಗಿದೆ.

ಈ ಬಾರಿ ಮೋದಿ ತಂಡದಲ್ಲಿ ಉತ್ತರ ಪ್ರದೇಶ, ಉತ್ತರಾಖಂಡ ಮತ್ತು ಪಂಜಾಬ್‌ನ ಅನೇಕರು ಮಂತ್ರಿಗಳಾಗುವ ಅವಕಾಶ ಪಡೆಯಬಹುದು ಎಂದೂ ವರದಿಯಾಗಿದೆ. ಮುಂದಿನ ವರ್ಷ ಈ 3 ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ ಎಂಬುದನ್ನು ಗಮನಿಸಬೇಕು.

ಮತದಾರರು ಬೂತ್ ಮಟ್ಟದ ಅಧಿಕಾರಿಗಳಿಗೆ ಸಂಪೂರ್ಣ ಸಹಕಾರ ನೀಡಿ: ಜಿಲ್ಲಾ ಚುನಾವಣಾಧಿಕಾರಿ ಪೂವಿತಾ

ರಾಯಚೂರು ಜೂನ್ 29

ಜಿಲ್ಲೆಯ ಎಲ್ಲಾ ಅರ್ಹ ಮತದಾರರು ಎಸ್‌ಐಆರ್ 2026ರ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿ ಬೂತ್ ಮಟ್ಟದ ಅಧಿಕಾರಿಗಳಿಗೆ ಸಂಪೂರ್ಣ ಸಹಕಾರ ನೀಡುವ ಮೂಲಕ ತಮ್ಮ ಮತ್ತು ತಮ್ಮ ಕುಟುಂಬದ ಎಲ್ಲ ಅರ್ಹ ಸದಸ್ಯರ ಹೆಸರುಗಳು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ತಿಳಿಸಿದ್ದಾರೆ.

ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯನ್ನು ಸಮಗ್ರ, ನಿಖರ ಹಾಗೂ ದೋಷರಹಿತಗೊಳಿಸುವ ಉದ್ದೇಶದಿಂದ ವಿಶೇಷ ತೀವ್ರ ಪರಿಷ್ಕರಣೆ-2026ರ ಕಾರ್ಯಕ್ರಮವನ್ನು ರಾಜ್ಯಾದ್ಯಂತ ಕೈಗೊಳ್ಳಲಾಗಿದೆ. ಜೂನ್ 30ರಿಂದ ಜುಲೈ 29ರವರೆಗೆ ಬೂತ್ ಮಟ್ಟದ ಅಧಿಕಾರಿಗಳು ಮನೆ-ಮನೆಗೆ ಭೇಟಿ ನೀಡಿ ಮತದಾರರಿಗೆ ಎನುಮರೇಷನ್ ಫಾರಂ ವಿತರಿಸಿ, ನಮೂನೆ ಭರ್ತಿ ಮಾಡುವ ಕುರಿತು ಅಗತ್ಯ ಮಾರ್ಗದರ್ಶನ ನೀಡಲಿದ್ದಾರೆ. ಈ ಪರಿಷ್ಕರಣೆಯ ಅರ್ಹತಾ ದಿನಾಂಕ 01 ಅಕ್ಟೋಬರ್ 2026 ಆಗಿರುತ್ತದೆ. ಈ ಕಾರ್ಯಕ್ರಮದ ಅಂಗವಾಗಿ ಜೂನ್ 30 ರಿಂದ ಜುಲೈ 29ರವರೆಗೆ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಓ) ಮನೆ- ಮನೆಗೆ ಭೇಟಿ ನೀಡಿ ಮತದಾರರಿಗೆ ಎನುಮರೇಷನ್ ಫಾರಂ ವಿತರಿಸಿ, ನಮೂನೆ ಭರ್ತಿ ಮಾಡುವ ಕುರಿತು ಅಗತ್ಯ ಮಾರ್ಗದರ್ಶನ ನೀಡಲಿದ್ದಾರೆ ಹಾಗೂ ಭರ್ತಿ ಮಾಡಿದ ನಮೂನೆಗಳನ್ನು ಸ್ವೀಕರಿಸಿ ಸ್ವೀಕೃತಿ ರಸೀದಿಯನ್ನು ನೀಡಲಿದ್ದಾರೆ.



ಕಾರ್ಯಕ್ರಮದ ವೇಳಾಪಟ್ಟಿ: ಜೂನ್ 30ರಿಂದ ಜುಲೈ 29ರವರೆಗೆ ಮನೆ-ಮನೆಗೆ ಬಿಎಲ್‌ಒಗಳ ಭೇಟಿ ನೀಡಲಿದ್ದಾರೆ. ಆಗಸ್ಟ್ 05ರಂದು ಕರಡು ಮತದಾರರ ಪಟ್ಟಿ ಪ್ರಕಟಣೆ ಮಾಡಲಾಗುವುದು. ಆಗಸ್ಟ್ 05ರಿಂದ ಸೆಪ್ಟೆಂಬರ್ 04ರವರೆಗೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಕೆಗೆ ಅವಧಿ ನೀಡಲಾಗಿದೆ. ಆಗಸ್ಟ್ 05ರಿಂದ ಅಕ್ಟೋಬರ್ 04ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳ ವಿಲೇವಾರಿ ಮಾಡಲಾಗುವುದು. ಅಕ್ಟೋಬರ್ 07ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಣೆ ಮಾಡಲಾಗುವುದು.

ಮತದಾರರು ಮಾಡಬೇಕಾದದ್ದು: ಬಿಎಲ್‌ಒಗಳಿಗೆ ಸಂಪೂರ್ಣ ಸಹಕಾರ ನೀಡಬೇಕು. ಇಸಿಐ ನೆಟ್ ನಲಿ ಬಿಎಲ್‌ಒಗಳ ಮಾಹಿತಿಯನ್ನು ಪಡೆಯಬಹುದಾಗಿದೆ. ಎನುಮರೇಷನ್ ಫಾರಂ ಅನ್ನು ಸಂಪೂರ್ಣವಾಗಿ ಹಾಗೂ ನಿಖರವಾಗಿ ಭರ್ತಿ ಮಾಡಿ ಸಲ್ಲಿಸಬೇಕು. ಇತ್ತೀಚಿನ ಬಣ್ಣದ ಭಾವಚಿತ್ರವನ್ನು ಅಂಟಿಸಬಹುದು (ಕಡ್ಡಾಯವಲ್ಲ). ಭರ್ತಿ ಮಾಡಿದ ನಮೂನೆಯನ್ನು ಬಿಎಲ್‌ಓ ಅವರಿಗೆ ಸಲ್ಲಿಸಿ ಸ್ವೀಕೃತಿ ರಸೀದಿಯನ್ನು ಪಡೆಯಬೇಕು ಅಥವಾ ಆನ್‌ಲೈನ್ ಮೂಲಕ ಭರ್ತಿ ಮಾಡಿ ಸಲ್ಲಿಸಬಹುದು. ಆಗಸ್ಟ್ 05ರಂದು ಪ್ರಕಟವಾಗುವ ಕರಡು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವ ಕುರಿತು

3ನೇ ಪುಟ.....

ಗುಣಮಟ್ಟದ ಕಾಮಗಾರಿ ಮಾಡಬೇಕು ಇಲ್ಲವಾದರೆ ಗುತ್ತೇದಾರರನ್ನು ಕಪ್ಪು ಪಟ್ಟಿಗೆ- ಬಸವನಗೌಡ ಬಾದರ್ಲಿ

ಸಿಂಧನೂರು,ಜೂ.29-

ನಗರದಲ್ಲಿ ನಡೆಯುತ್ತಿರುವ ಜಿಲ್ಲಾ ಆಸ್ಪತ್ರೆ ಕಟ್ಟಡ ಕಾಮಗಾರಿ ಕಳಪೆ ಸಾಬೀತಾಗಿದ್ದು, ಅಧಿಕಾರಿ ಹಾಗೂ ಗುತ್ತೇದಾರರ ವಿರುದ್ಧ ವಿಧಾನ ಪರಿಷತ್ ಶಾಸಕ ಬಸನಗೌಡ ಬಾದರ್ಲಿ ಆಕ್ರೋಶ ವ್ಯಕ್ತಪಡಿಸಿದರು. ರವಿವಾರ ನಗರದ ಸಾರ್ವಜನಿಕ ಆಸ್ಪತ್ರೆ ಹಿಂದುಗಡೆ ನಡೆಯುತ್ತಿರುವ ಜಿಲ್ಲಾ ಆಸ್ಪತ್ರೆ ಕಟ್ಟಡದ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದವರು ಕಳಪೆ ಕಾಮಗಾರಿ ಕಂಡು ಗುತ್ತಿದಾರರಿಗೆ ತರಾಟೆಗೆ ತೆಗೆದುಕೊಂಡರು. ಅಂದಾಜು ಪತ್ರಿಕೆಯಂತೆ ಕಾಮಗಾರಿ ನಡೆಯುತ್ತಿಲ್ಲ 40. ಬದಲಾಗಿ 20 ಕಲ್ಲು ಕಾಮಗಾರಿಗೆ ಬಳಸಲಾಗುತ್ತಿದ್ದು.



ಇನ್ನು ನಾಲ್ಕು ಇಂಚು ಕಾಂಕ್ರೀಟ್ ಹಾಕುವ ಬದಲು ಎರಡು ಇಂಚು ಕಾಂಕ್ರೀಟ್ ಹಾಕಿ ಸರಿಯಾಗಿ ಕ್ಯೂರಿಂಗ್ ಮಾಡದೆ ಕಾಮಗಾರಿ ನಿರ್ವಹಿಸುತ್ತಿರುವ ಬಗ್ಗೆ ಸ್ಥಳದಲ್ಲಿ ಅಧಿಕಾರಿಗಳ ವಿರುದ್ಧ ಸಿಡಿಮಿಡಿಗೊಂಡರು. ಗುಣಮಟ್ಟದ ಕಾಮಗಾರಿ ನಡೆಸಬೇಕು ಇಲ್ಲವಾದರೆ ಗುತ್ತೆದಾರರನ್ನು ಕಪ್ಪು ಪಟ್ಟಿಗೆ ಸೇರಿಸುವುದಾಗಿ ಸ್ಥಳದಲ್ಲಿಯೇ ಎಚ್ಚರಿಕೆಯನ್ನು ನೀಡಿದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಸರಕಾರ ಹಾಗೂ ಮುಖ್ಯಮಂತ್ರಿಗಳು ಗುಣಮಟ್ಟದ ಕಾಮಗಾರಿಗಳನ್ನು ಕೈಗೊಳ್ಳಲು ಸೂಚಿಸಿದ್ದಾರೆ. ಆದರೆ 200. ಹಾಸಿಗೆಯ ಜಿಲ್ಲಾ ಆಸ್ಪತ್ರೆ ಕಾಮಗಾರಿ ಕಳಪೆಯಿಂದ ಸಾಗಿದ್ದು ಅಧಿಕಾರಿಗಳು ಹಾಗೂ ಗುತ್ತೇದಾರರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು

3ನೇ ಪುಟ.....

ರಿಪೋರ್ಟರ್ಸ್ ಗಿಲ್ಡ್ ಕಥೆ-ಕವನ ಫಲಿತಾಂಶ ಪ್ರಕಟ

ಆಗಸ್ಟ್ ಕೊನೆಯಲ್ಲಿ ಬೆಳ್ಳಿ ಮಹೋತ್ಸವ- ವಿಜಯ ಜಾಗಟಗಲ್

ರಾಯಚೂರು,ಜೂ.29-

ರಾಯಚೂರು ರಿಪೋರ್ಟರ್ಸ್ ಗಿಲ್ಡ್‌ನ ಬೆಳ್ಳಿ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ರಾಜ್ಯ ಮಟ್ಟದ ಪತ್ರಕರ್ತರ ಕಥೆ ಹಾಗೂ ಕವನ ಸ್ಪರ್ಧೆಯ ಫಲಿತಾಂಶ ಪ್ರಕಟವಾಗಿದ್ದು, ರಾಜ್ಯದ ವಿವಿಧ ಜಿಲ್ಲೆಗಳ ಪತ್ರಕರ್ತರ ಸಾಹಿತ್ಯ ಪ್ರತಿಭೆಗೆ ವೇದಿಕೆ ಒದಗಿಸಿದೆ.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಫಲಿತಾಂಶ ಪ್ರಕಟಿಸಿದ ಗಿಲ್ಡ್ ಅಧ್ಯಕ್ಷ ವಿಜಯ ಜಾಗಟಗಲ್, ರಾಜ್ಯದ ವಿವಿಧ ಭಾಗಗಳಿಂದ ಸ್ಪರ್ಧೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು,



ಆಯ್ಕೆಯಾದ ಕಥೆ ಮತ್ತು ಕವನಗಳು ಪತ್ರಿಕೋದ್ಯಮದೊಂದಿಗೆ ಸಾಹಿತ್ಯದ ಸೃಜನಶೀಲತೆಯನ್ನೂ ಪ್ರತಿಬಿಂಬಿಸುತ್ತವೆ ಎಂದು ಹೇಳಿದರು.

ಕಥಾ ವಿಭಾಗದಲ್ಲಿ ಚಿತ್ರದುರ್ಗದ ಪ್ರಜಾವಾಣಿಯ ಕೆ.ಪಿ. ಓಂಕಾರಮೂರ್ತಿ ಅವರ ''ಡೆಡ್ ಲೈನ್'' ಪ್ರಥಮ ಸ್ಥಾನ, ಮೈಸೂರಿನ ಶ್ರೀನಿವಾಸ ಎಂ ಅವರ ''ನಿಧನ ವಾರ್ತೆ'' ದ್ವಿತೀಯ ಹಾಗೂ ಉದಯವಾಣಿ ರಾಯಚೂರು ಹಿರಿಯ ಜಿಲ್ಲಾ ವರದಿಗಾರ ಸಿದ್ದಯ್ಯಸ್ವಾಮಿ ಕುಕನೂರು ಅವರ ''ಪ್ರೆಸಿಡೆಂಟ್ ಶಂಕ್ರ'' ತೃತೀಯ ಸ್ಥಾನ ಪಡೆದಿವೆ. ಕವನ ವಿಭಾಗದಲ್ಲಿ ಶ್ರೀನಿವಾಸ ಎಂ ಅವರ ''ಮುಸ್ಸಂಜೆಯ ಕಥೆಗಳು'' ಪ್ರಥಮ ಸ್ಥಾನ ಪಡೆದಿದ್ದು, ಶಂಕರ ಪಾಗೋಜಿ ಹಾಗೂ ಚಂದಪ್ಪ ದೊರನಹಳ್ಳಿ ಅವರ ಕವನಗಳು ಜಂಟಿ ದ್ವಿತೀಯ ಸ್ಥಾನ ಗಳಿಸಿವೆ. ಉಮಾಶಂಕರ ಹಿರೇಮಠ ಯಲಬುರ್ಗಾ ಅವರ ''ಅಂಧಭಕ್ತರು'' ಕವನ ತೃತೀಯ ಸ್ಥಾನ ಪಡೆದಿದೆ.

ಕಥಾ ವಿಭಾಗದಲ್ಲಿ ₹10 ಸಾವಿರ, ₹7 ಸಾವಿರ ಹಾಗೂ ₹3 ಸಾವಿರ ಹಾಗೂ ಕವನ ವಿಭಾಗದಲ್ಲಿ ₹5 ಸಾವಿರ, ₹3 ಸಾವಿರ ಮತ್ತು ₹2 ಸಾವಿರ ಬಹುಮಾನ ನಿಗದಿಪಡಿಸಲಾಗಿದೆ. ತೀರ್ಪುಗಾರರ ವಿಶೇಷ ಮೆಚ್ಚುಗೆ ಪಡೆದ ಪ್ರತಿಯೊಂದು ಕೃತಿಗೂ ₹1 ಸಾವಿರ ನಗದು ಬಹುಮಾನ ನೀಡಲಾಗುವುದು.

ಖ್ಯಾತ ಕಥೆಗಾರ ಮಹಾಂತೇಶ ನವಲಕಲ್ ಹಾಗೂ ಹಿರಿಯ ಪತ್ರಕರ್ತ-ಕವಿ ತುರುವೀಹಾಳ ಚಂದ್ರು ತೀರ್ಪುಗಾರರಾಗಿ

3ನೇ ಪುಟ.....

''ಮೂರು ಜೀವ ತಿಂದ ಬಿಲ್ಡಿಂಗ್'' ಸಮಗ್ರ ತನಿಖೆಗೆ ಹನುಮಂತಪ್ಪ ಆಗ್ರಹ

ದೇವದುರ್ಗ,ಜೂ.29-

ದೇವದುರ್ಗ ಬಸ್ ನಿಲ್ದಾಣದ ಸಮೀಪ ಇರುವ ಕಟ್ಟಡದ ಮೇಲ್ಚಾವಣಿಯ ಭಾಗ ಕುಸಿದು ಬಿದ್ದ ಪರಿಣಾಮ ಮೂವರು ಮೃತಪಟ್ಟಿರುವ ಘಟನೆ ತೀವ್ರ ದುಃಖ ಮತ್ತು ಆತಂಕಕ್ಕೆ ಕಾರಣವಾಗಿದೆ. ಲಭ್ಯ ಮಾಹಿತಿಯಂತೆ, ಅವಘಡದಲ್ಲಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು, ಮತ್ತೊಬ್ಬರು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದ ವೇಳೆ ಮೃತಪಟ್ಟಿದ್ದಾರೆ ಎಂದು ತಿಳಿದು ಬಂದಿದೆ.

ಘಟನೆಯಿಂದ ಮೃತರ ಕುಟುಂಬಗಳಲ್ಲಿ ಆಕ್ರಂದನ ಮಡುಗಟ್ಟಿದ್ದು, ತಮ್ಮ ಮಕ್ಕಳ ಹಾಗೂ ಕುಟುಂಬ ಸದಸ್ಯರ ಭವಿಷ್ಯದ ಕನಸುಗಳು ಕ್ಷಣಾರ್ಧದಲ್ಲಿ ಭಗ್ನಗೊಂಡಿವೆ ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಎಂಆರ್‌ಎಚ್‌ಎಸ್ ರಾಯಚೂರು ಜಿಲ್ಲಾ ಅಧ್ಯಕ್ಷ ಹನುಮಂತಪ್ಪ ಮನ್ನಾಪೂರಿ ಅವರು, ಘಟನೆಯ ಸಂಪೂರ್ಣ ಸತ್ಯಾಂಶವನ್ನು ಸರ್ಕಾರ ಹಾಗೂ ಸಂಬಂಧಿತ ಇಲಾಖೆ ಪಾರದರ್ಶಕವಾಗಿ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.



ಕಟ್ಟಡದ ಸ್ಥಿತಿ, ನಿರ್ವಹಣೆ, ಸುರಕ್ಷತಾ ಪರಿಶೀಲನೆ ಹಾಗೂ

3 ನೇ ಪುಟಕ್ಕೆ

ಅಗ್ನಿವೀರ ತರಬೇತಿ ಪೂರ್ಣಗೊಳಿಸಿ ಸ್ವಗ್ರಾಮಕ್ಕೆ ಆಗಮಿಸಿದ ಯೋಧನಿಗೆ ಅದ್ದೂರಿ ಸ್ವಾಗತ

ಮಾನ್ವಿ,ಜೂ.29-

ದೇಶದ ರಕ್ಷಣಾ ಸೇವೆಗೆ ಆಯ್ಕೆಯಾಗಿ ಅಗ್ನಿವೀರ ಸೇನಾ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಸ್ವಗ್ರಾಮಕ್ಕೆ ಆಗಮಿಸಿದ ಈರೇಶ ನಾಯಕ ಬೋಮ್ಮನಾಳ ಯೋಧನಿಗೆ ಗ್ರಾಮಸ್ಥರು ಅದ್ದೂರಿ ಸ್ವಾಗತ ನೀಡಿ ಗೌರವಿಸಿದರು. ಮಂತ್ರಾಲಯ ಕ್ರಾಸ್ ನಿಂದ ಕಪಗಲ್ ಗ್ರಾಮದ ಸಿದ್ದರೂಢ ಮಠಕ್ಕೆ ಮೆರವಣಿಗೆ ಮಾಡಿದರು.

ದೇಶ ಸೇವೆಯ ಕನಸನ್ನು ನನಸಾಗಿಸಿಕೊಂಡು ತರಬೇತಿ ಮುಗಿಸಿ ಬಂದ ಯೋಧನನ್ನು ಗ್ರಾಮದ ಪ್ರಮುಖರು, ಹಿರಿಯರು, ಯುವಕರು ಹಾಗೂ ಸಾರ್ವಜನಿಕರು ಹೂಮಾಲೆ ಹಾಕಿ, ಸಿಹಿ ಹಂಚಿ,



ಪಟಾಕಿ ಸಿಡಿಸಿ ಸಂಭ್ರಮದಿಂದ ಬರಮಾಡಿಕೊಂಡರು. ಗ್ರಾಮದ ಬೀದಿಗಳಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು, ಯೋಧನ ಆಗಮನ ಗ್ರಾಮಸ್ಥರಲ್ಲಿ ಸಂತಸ ಮೂಡಿಸಿತು.

ಈ ಸಂದರ್ಭದಲ್ಲಿ ವಾಲ್ಮೀಕಿ ಸಮಾಜದ ಅಧ್ಯಕ್ಷ ಶ್ರೀನಿವಾಸ ನಾಯಕ ಮಾತನಾಡಿ ಸೇನೆಯಲ್ಲಿ ಸೇವೆ ಸಲ್ಲಿಸುವ ಅವಕಾಶ ಪ್ರತಿಯೊಬ್ಬರಿಗೂ ಸಿಗುವುದಿಲ್ಲ. ಧೈರ್ಯ, ಶಿಸ್ತು ಹಾಗೂ ಪರಿಶ್ರಮದಿಂದ ಅಗ್ನಿವೀರ ತರಬೇತಿಯನ್ನು ಪೂರ್ಣಗೊಳಿಸಿರುವುದು ಗ್ರಾಮದ ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದರು.

3 ನೇ ಪುಟಕ್ಕೆ

ಚಿಕ್ಕಸೂಗೂರು ಮನೆಕಳ್ಳತನ ಪ್ರಕರಣ ಭೇದಿಸಿದ ಗ್ರಾಮೀಣ ಪೊಲೀಸರು: ಇಬ್ಬರು ಆರೋಪಿಗಳ ಬಂಧನ







ರಾಯಚೂರು,ಜೂ.29-

ರಾಯಚೂರು ತಾಲ್ಲೂಕಿನ ಚಿಕ್ಕಸೂಗೂರು ಗ್ರಾಮದಲ್ಲಿ ನಡೆದ ಎರಡು ಪ್ರತ್ಯೇಕ ಮನೆ ಕಳ್ಳತನ ಪ್ರಕರಣಗಳನ್ನು ರಾಯಚೂರು ಗ್ರಾಮೀಣ ಪೊಲೀಸರು ಯಶಸ್ವಿಯಾಗಿ ಭೇದಿಸಿದ್ದು, ಇಬ್ಬರು ಆರೋಪಿಗಳನ್ನು ಬಂಧಿಸಿ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನ-ಬೆಳ್ಳಿ ಆಭರಣಗಳು ಹಾಗೂ ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿದ್ದಾರೆ.

ಪೊಲೀಸ್ ಅಧೀಕ್ಷಕರ ಮಾರ್ಗದರ್ಶನದಲ್ಲಿ ರಚಿಸಲಾದ ವಿಶೇಷ ತಂಡವು ಪ್ರಕರಣದ ತನಿಖೆ ನಡೆಸಿ ಆರೋಪಿತರಾದ ಅಂಜಿನಯ್ಯ ಅಲಿಯಾಸ್ ಅಂಜಿ ಹಾಗೂ ಪರಶುರಾಮ ಅಲಿಯಾಸ್ ಪರಶ್ಯ ಅವರನ್ನು ಪತ್ತೆಹಚ್ಚಿ ವಿಚಾರಣೆ ನಡೆಸಿತು. ವಿಚಾರಣೆಯಲ್ಲಿ ಆರೋಪಿಗಳು ಮನೆ ಕಳ್ಳತನ ನಡೆಸಿರುವುದನ್ನು ಒಪ್ಪಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಬಂಧಿತ ಆರೋಪಿಗಳಿಂದ ಸುಮಾರು 20 ಗ್ರಾಂ ಬಂಗಾರ ಆಭರಣಗಳು, 300 ಗ್ರಾಂ ಬೆಳ್ಳಿ ಆಭರಣಗಳು, ಮೂರು ದ್ವಿಚಕ್ರ ವಾಹನಗಳು ಹಾಗೂ ಇತರೆ ವಸ್ತುಗಳನ್ನು ಸೇರಿ ಒಟ್ಟು ₹3,51,500 ಮೌಲ್ಯದ ಆಸ್ತಿ ಜಪ್ತಿ ಮಾಡಲಾಗಿದೆ ಎಂದು ಮಾಹಿತಿ ನೀಡಲಾಗಿದೆ. ಜೊತೆಗೆ ಆರೋಪಿಗಳು ರಾಯಚೂರು ಗ್ರಾಮೀಣ ಹಾಗೂ ಮಾನವಿ ಪೊಲೀಸ್ ಠಾಣಾ ವ್ಯಾಪ್ತಿಯ ಕೆಲವು ವಾಹನ ಕಳ್ಳತನ ಪ್ರಕರಣಗಳಲ್ಲೂ ಭಾಗಿಯಾಗಿರುವುದಾಗಿ ವಿಚಾರಣೆಯಲ್ಲಿ ಬೆಳಕಿಗೆ ಬಂದಿದೆ ಎಂದು ತಿಳಿದುಬಂದಿದೆ.

ಈ ಕಾರ್ಯಾಚರಣೆ ಪೊಲೀಸ್ ಅಧೀಕ್ಷಕರಾದ ಅರುಣಾಂಗ್ಶು ಗಿರಿ ಅವರ ಮಾರ್ಗದರ್ಶನದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕರು, ಉಪಾಧೀಕ್ಷಕರು, ಗ್ರಾಮೀಣ ವೃತ್ತದ ಸಿಪಿಐ ಹಾಗೂ ರಾಯಚೂರು

3 ನೇ ಪುಟಕ್ಕೆ

ರಾಷ್ಟ್ರೀಯ ಪಲ್ಸ್ ಪೋಲಿಯೊ ಅಭಿಯಾನಕ್ಕೆ ಶಾಸಕ ಅಲ್ಲಮಪ್ರಭು ಪಾಟೀಲ್ ಚಾಲನೆ



ಕಲಬುರಗಿ,ಜೂ.29-

ಐದು ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಎರಡು ಹನಿ ಪೋಲಿಯೊ ಲಸಿಕೆ ನೀಡುವ ಮೂಲಕ ಕಲಬುರಗಿಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೊ ಅಭಿಯಾನಕ್ಕೆ ದಕ್ಷಿಣ ಮತಕ್ಷೇತ್ರದ ಶಾಸಕ ಅಲ್ಲಮಪ್ರಭು ಪಾಟೀಲ ಅವರು ರವಿವಾರ ಚಾಲನೆ ನೀಡಿದರು.

ನಗರದ ಆಳಂದ ಚೆಕ್‌ಪೋಸ್ಟ್ ಬಳಿಯ ದುಬೈ ಕಾಲೋನಿ ಹತ್ತಿರದ ಶಿವಾಜಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ಜಿಲ್ಲಾ ಆರ್‌ಸಿಎಚ್ ಅಧಿಕಾರಿಗಳ ಸಹಯೋಗದಲ್ಲಿ ಉದ್ಘಾಟನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಅಲ್ಲಮಪ್ರಭು ಪಾಟೀಲ, ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪೋಲಿಯೊ ಲಸಿಕೆ ನೀಡುವುದು ಅತ್ಯಂತ ಅಗತ್ಯವಾಗಿದ್ದು, ಪಾಲಕರು ಯಾವುದೇ ಕಾರಣಕ್ಕೂ ತಮ್ಮ ಮಕ್ಕಳಿಗೆ ಲಸಿಕೆ ತಪ್ಪಿಸಬಾರದು ಎಂದು ಕರೆ ನೀಡಿದರು. ಜಿಲ್ಲಾ ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ, ಮೊದಲ ದಿನ ಬೂತ್ ಮಟ್ಟದಲ್ಲಿ ಲಸಿಕೆ ನೀಡಲಾಗುತ್ತಿದ್ದು, ಮುಂದಿನ ಮೂರು ದಿನಗಳ ಕಾಲ ಮನೆ ಮನೆಗೆ ತೆರಳಿ ಲಸಿಕೆ ನೀಡಲಾಗುತ್ತದೆ. ಜೂನ್ 28 ರಿಂದ ಜುಲೈ 1 ರವರೆಗೆ ದೇಶಾದ್ಯಂತ ಈ ಅಭಿಯಾನ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದರು.

ಜಿಲ್ಲೆಯಲ್ಲಿ ಒಟ್ಟು 3,51,716 ಐದು ವರ್ಷದೊಳಗಿನ ಮಕ್ಕಳಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದ್ದು, 1,519 ಲಸಿಕೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕಾರ್ಯಕ್ಕಾಗಿ 1,453 ತಂಡಗಳು, 132 ಟ್ರಾನ್ಸಿಟ್ ತಂಡಗಳು ಹಾಗೂ 31 ಸಂಚಾರಿ ತಂಡಗಳು ಸೇರಿದಂತೆ ಒಟ್ಟು 1,682 ತಂಡಗಳು ಕಾರ್ಯನಿರ್ವಹಿಸುತ್ತಿವೆ. ಮೇಲ್ವಿಚಾರಣೆಗೆ 333 ಅಧಿಕಾರಿಗಳು ಹಾಗೂ 3,364 ಲಸಿಕಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರೇಷ್ಮೆ ಉದ್ಯಮಿಗಳ ನಿಗಮದ ಅಧ್ಯಕ್ಷೆ ಹಾಗೂ ವಿಧಾನ ಪರಿಷತ್ ಸದಸ್ಯೆ ಕನೀಜ್ ಫಾತಿಮಾ ಅವರು ಮಕ್ಕಳಿಗೆ ಲಸಿಕೆ ನೀಡುವ ಮೂಲಕ ಅಭಿಯಾನಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಶರಣಬಸಪ್ಪ ಕ್ಯಾತನಾಳ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ. ಸಿದ್ದು ಪಾಟೀಲ್ ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಜಿಪಂ ಸಿಇಒ ರಾಹುಲ್ ಎಸ್. ಸಂಕನೂರ, ಅಪರ ನಿರ್ದೇಶಕಿ ಡಾ. ಪುಷ್ಪ ಎಚ್.ಆರ್., ಜಂಟಿ ನಿರ್ದೇಶಕ ಡಾ. ಶಂಕ್ರಪ್ಪ ಮೈಲಾರಿ, ಉಪ ನಿರ್ದೇಶಕ ಡಾ. ಶರಣಬಸಪ್ಪ ಗಣಜಲಖೇಡ್, ವಿಶ್ವಸಂಸ್ಥೆ ಪೋಲಿಯೊ ಸರ್ವೇಕ್ಷಣಾಧಿಕಾರಿ ಡಾ. ಅನಿಲಕುಮಾರ ತಾಳಿಕೋಟಿ, ಜಿಲ್ಲಾ ಸಮೀಕ್ಷಣಾಧಿಕಾರಿ ಡಾ. ರಾಕೇಶ್ ಕಾಂಬಳೆ, ಕ್ಷಯರೋಗ ನಿರ್ಮೂಲನಾಧಿಕಾರಿ ಡಾ. ಚಂದ್ರಕಾಂತ ನರಿಬೋಳ, ಕುಟುಂಬ ಕಲ್ಯಾಣಾಧಿಕಾರಿ ಡಾ. ವಿವೇಕಾನಂದ ರಡ್ಡಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.



ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮಕ್ಕೆ ಶಾಸಕ ಕೆ. ರಾಘವೇಂದ್ರ ಹಿಟ್ನಾಳ ಚಾಲನೆ

ಕೊಪ್ಪಳ ಜೂ.29-

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಿವಿಧ ಇಲಾಖೆಗಳ ಸಹಯೋಗದೊಂದಿದೆ ಜಿಲ್ಲೆಯಾದ್ಯಂತ ಜೂನ್ 28 ರಿಂದ ಜುಲೈ 1ರವರೆಗೆ ಹಮ್ಮಿಕೊಳ್ಳಲಾದ ಒಂದನೇ ಸುತ್ತಿನ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಶಾಸಕರಾದ ಕೆ. ರಾಘವೇಂದ್ರ ಹಿಟ್ನಾಳ ಅವರು ಮಕ್ಕಳಿಗೆ ಪೋಲಿಯೋ ಹನಿ ಹಾಕುವುದರ ಮೂಲಕ ಚಾಲನೆ ನೀಡಿದರು.

ಕೊಪ್ಪಳ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ಭಾನುವಾರ ನಡೆದ ಈ ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ವರ್ಣಿತ್ ನೇಗಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷರಾದ ಮಂಜುನಾಥ ಜಿ. ಗೊಂಡಬಾಳ, ಕೊಪ್ಪಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಲಿಂಗರಾಜ ಟಿ., ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿಗಳಾದ ಡಾ. ಪ್ರಕಾಶ ವಿ., ಜಿಲ್ಲಾ ಸರ್ವೇಕ್ಷಣಾಧಿಕಾರಿಗಳಾದ ಡಾ. ನಂದಕುಮಾರ, ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿಗಳಾದ ಡಾ. ಗೋನಾಳ ಕುಮಾರಸ್ವಾಮಿ, ತಾಲ್ಲೂಕು ಅರೋಗ್ಯಾಧಿಕಾರಿಗಳಾರ ಡಾ. ರಾಮಾಂಜನೇಯ, ತಾಲ್ಲೂಕು ಗ್ಯಾರಂಟಿ ಸಮಿತಿ ಸದಸ್ಯರಾದ ಜ್ಯೋತಿ ಎಂ. ಗೊಂಡಬಾಳ, ರೋಟರಿ ಕ್ಲಬ್‌ನ ಡಾ. ಕೆ. ಜಿ. ಕುಲಕರ್ಣಿ, ಡಾ. ರಾಧಾ ಕುಲಕರ್ಣಿ ಸೇರಿದಂತೆ ಆರೋಗ್ಯ ಇಲಾಖೆ, ಕೆ.ಕೆ.ಆರ್.ಟಿ.ಸಿ. ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳು, ವೈದ್ಯರು, ಸಿಬ್ಬಂದಿ ಹಾಗೂ ವಿವಿಧ ಸಂಘಸಂಸ್ಥೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಬಳ್ಳಾರಿಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನಕ್ಕೆ ಚಾಲನೆ

ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ತಪ್ಪದೇ ಪೋಲಿಯೋ ಲಸಿಕೆ ಹಾಕಿಸಿ: ಮೇಯರ್ ಪಿ.ಗಾದೆಪ್ಪ ಕರೆ



ಬಳ್ಳಾರಿ,ಜೂ.29-

ದೇಶದಲ್ಲಿ ಈಗಾಗಲೇ 14 ವರ್ಷಗಳ ಹಿಂದೆಯೇ ಪೋಲಿಯೊ ಮುಕ್ತ ಎಂದು ಘೋಷಣೆಯಾಗಿದ್ದರೂ, ಮುನ್ನೆಚ್ಚರಿಕಾ ಕ್ರಮವಾಗಿ ಮಕ್ಕಳಲ್ಲಿ ರೋಗನಿರೋಧಕ ಶಕ್ತಿ ಹೆಚ್ಚಿಸಲು ಹಾಗೂ ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ತಪ್ಪದೇ ಪೋಲಿಯೊ ಲಸಿಕೆ ಹಾಕಿಸಬೇಕು ಎಂದು ಮಹಾನಗರ ಪಾಲಿಕೆಯ ಮಹಾಪೌರರಾದ ಪಿ.ಗಾದೆಪ್ಪ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಆಸ್ಪತ್ರೆಯ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾಸ್ಪತ್ರೆಯ ಮುಂಭಾಗದ ಎಮ್.ಸಿ.ಎಚ್ ಆಸ್ಪತ್ರೆಯ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಲಸಿಕೆ ಪಡೆದರೂ ಮಕ್ಕಳಿಗೆ ಯಾವುದೇ ಅಡ್ಡಪರಿಣಾಮ ಬೀರದೆ, ಅವರಲ್ಲಿ ರೋಗನಿರೋಧಕ ಶಕ್ತಿ ಮತ್ತಷ್ಟು ಹೆಚ್ಚಾಗಲಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿ, ಎಲ್ಲರೂ ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಅಧಿಕಾರಿಗಳು ಮನವರಿಕೆ ಮಾಡಿಕೊಡಬೇಕು. ಮುಂಬರುವ ದಿನಗಳಲ್ಲಿಯೂ ನಗರವನ್ನು ಸಂಪೂರ್ಣ ಆರೋಗ್ಯಯುತವಾಗಿಡಲು ಎಲ್ಲರ ಸಹಕಾರ ಅಗತ್ಯವಾಗಿದೆ ಎಂದು ತಿಳಿಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ. ಚಿದಾನಂದಪ್ಪ ಅವರು ಮಾತನಾಡಿ, ದೇಶ ಮತ್ತು ರಾಜ್ಯದಲ್ಲಿ ಸಮೃದ್ಧಿಯನ್ನು ಕಾಣಬೇಕಾದರೆ ಆರೋಗ್ಯವಂತ ತಾಯಿ ಮತ್ತು ಮಗು ಅತ್ಯಂತ ಅವಶ್ಯಕ. 1995ರಲ್ಲಿ ಪ್ರಾರಂಭವಾದ ಪಲ್ಸ್ ಪೋಲಿಯೋ ಕಾರ್ಯಕ್ರಮದ ಫಲವಾಗಿ 2014ರಲ್ಲಿ ಭಾರತವನ್ನು ಪೋಲಿಯೋ ಮುಕ್ತ ದೇಶ ಎಂದು ಘೋಷಿಸಲಾಗಿದೆ. ಆದಾಗ್ಯೂ, ಭವಿಷ್ಯದಲ್ಲಿ ಮಕ್ಕಳಿಗೆ ಯಾವುದೇ ರೀತಿಯ ಅಂಗವೈಕಲ್ಯ ಬಾಧಿಸಬಾರದು ಮತ್ತು ಅವರ ರೋಗನಿರೋಧಕ ಶಕ್ತಿ ಹೆಚ್ಚಬೇಕು ಎಂಬ ಉದ್ದೇಶದಿಂದ ಈ ಅಭಿಯಾನವನ್ನು ಮುಂದುವರಿಸಲಾಗುತ್ತಿದೆ ಎಂದು ತಿಳಿಸಿದರು.

5 ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ಹಾಕುವ ಎರಡು ಹನಿ ಪೋಲಿಯೋ ಲಸಿಕೆ ಕೇವಲ ಔಷಧವಲ್ಲ, ಅದು ಮಗುವಿನ ಜೀವನಕ್ಕೆ ಅಮೃತವಿದ್ದಂತೆ. ಕಳೆದ 15-20 ವರ್ಷಗಳ ಹಿಂದೆ ಕಾಣಿಸಿಕೊಳ್ಳುತ್ತಿದ್ದ ಪೋಲಿಯೋ ಪ್ರಕರಣಗಳು, ನಿರಂತರ ಲಸಿಕಾ ಅಭಿಯಾನದ ಯಶಸ್ಸಿನಿಂದಾಗಿ ಇಂದು ಸಂಪೂರ್ಣವಾಗಿ ಇಲ್ಲದಂತಾಗಿವೆ. ಈ ವೈರಸ್ ಅನ್ನು ದೇಶದಿಂದ ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳಿಗೆ ತಪ್ಪದೇ ಲಸಿಕೆ ಹಾಕಿಸಬೇಕು ಎಂದು ಅವರು ಮನವಿ ಮಾಡಿದರು.

★1.99 ಲಕ್ಷ ಮಕ್ಕಳಿಗೆ ಲಸಿಕೆ ಗುರಿ:★

ರಾಷ್ಟ್ರೀಯ ಲಸಿಕಾ ದಿನಗಳ ಅಂಗವಾಗಿ ಜಿಲ್ಲೆಯಲ್ಲಿ ಜೂನ್ 28 ರಿಂದ ಜುಲೈ 1 ರವರೆಗೆ ನಾಲ್ಕು ದಿನಗಳ ಕಾಲ ಹಮ್ಮಿಕೊಳ್ಳಲಾಗಿರುವ ಪಲ್ಸ್ ಪೋಲಿಯೊ ಲಸಿಕಾ ಅಭಿಯಾನ ನಡೆಯಲಿದೆ. ಜಿಲ್ಲೆಯ ಒಟ್ಟು 16.74 ಲಕ್ಷ ಜನಸಂಖ್ಯೆಯ ವ್ಯಾಪ್ತಿಯಲ್ಲಿ 0 ರಿಂದ 5 ವರ್ಷದೊಳಗಿನ ಒಟ್ಟು 1,99,703 ಮಕ್ಕಳಿಗೆ ಪೋಲಿಯೊ ಹನಿ ಹಾಕುವ ಗುರಿ ಹೊಂದಲಾಗಿದೆ.

ಮೊದಲ ದಿನ ಬೂತ್‌ಗಳಲ್ಲಿ ಲಸಿಕೆ ಹಾಕಲಿದ್ದು, ಮುಂದಿನ ಮೂರು ದಿನಗಳ ಕಾಲ ಲಸಿಕಾ ಸಿಬ್ಬಂದಿ ಜಿಲ್ಲೆಯ ಒಟ್ಟು 3.49 ಲಕ್ಷ ಮನೆಗಳಿಗೆ ಖುದ್ದಾಗಿ ಭೇಟಿ ನೀಡಿ ಮಕ್ಕಳಿಗೆ ಲಸಿಕೆ ಹಾಕಲಿದ್ದಾರೆ. ಇದಕ್ಕಾಗಿ ಪ್ರಮುಖ ಆಸ್ಪತ್ರೆ, ಬಸ್ ನಿಲ್ದಾಣ ಮತ್ತು ರೈಲ್ವೆ ನಿಲ್ದಾಣಗಳಲ್ಲಿ 15 ಸಂಚಾರಿ (ಮೊಬೈಲ್) ತಂಡಗಳನ್ನು ನಿಯೋಜಿಸಲಾಗಿದೆ. ಅಭಿಯಾನಕ್ಕಾಗಿ ಒಟ್ಟು 3,10,143 ಲಸಿಕೆ ಡೋಸ್‌ಗಳನ್ನು (12,711 ವಯಲ್ಸ್) ಸಿದ್ದಪಡಿಸಿಕೊಳ್ಳಲಾಗಿದೆ. ವಿಶೇಷವಾಗಿ ಕಟ್ಟಡ ಕಾರ್ಮಿಕರು, ಅಲೆಮಾರಿಗಳು ವಾಸಿಸುವ ವಲಸೆ ಹಾಗೂ ಹೈ-ರಿಸ್ಕ್ ಅಪಾಯದ ಅಂಚಿನಲ್ಲಿರುವ) ಪ್ರದೇಶಗಳ ಮೇಲೆ ಹೆಚ್ಚಿನ ನಿಗಾ ಇಡಲಾಗಿದೆ.

ಇದೇ ವೇಳೆ ಗಣ್ಯರು ಹುಟ್ಟಿನಿಂದ ಐದು ವರ್ಷದೊಳಗಿನ ಮಕ್ಕಳಿಗೆ ಜೀವಹನಿ ಎರಡು ಹನಿ ಪೋಲಿಯೋ ಲಸಿಕೆ ಹಾಕಿದರು.

ಈ ಸಂದರ್ಭದಲ್ಲಿ ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೊರೇಷನ್ ಲಿಮಿಟೆಡ್‌ನ ಉಪಾಧ್ಯಕ್ಷ ಹೆಚ್. ಲಕ್ಷ್ಮಣ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೈರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲಾ ಆರ್.ಸಿ.ಎಚ್ ಅಧಿಕಾರಿ ಡಾ.ಹನುಮಂತಪ್ಪ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಸೇರಿದಂತೆ ಆರೋಗ್ಯ ಇಲಾಖೆ ಅಧಿಕಾರಿ- ಸಿಬ್ಬಂದಿ ಹಾಗೂ ಸಾರ್ವಜನಿಕರು ಇದ್ದರು.



ಪೋಲಿಯೋ ಮುಕ್ತ ಜಿಲ್ಲೆಗೆ ಸಹಕರಿಸಿ

ವಿಜಯನಗರ ,ಜೂ.29-

ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನದ ಅಂಗವಾಗಿ ಜಿಲ್ಲಾಡಳಿತ, ರೋಟರಿ ಕ್ಲಬ್, ಭಾರತೀಯ ವೈದ್ಯಕೀಯ ಸಂಘ, ಮಲ್ಲಿಗೆ ಪ್ಯಾರಾ ಮೆಡಿಕಲ್ ಕಾಲೇಜು ಮತ್ತು ತುಂಗಭದ್ರ ಸ್ಕೂಲ್ ಆಫ್ ನರ್ಸಿಂಗ್, ದಿಪಾಲಿ ಸ್ಕೂಲ್ ಆಫ್ ನರ್ಸಿಂಗ್, ಟಿ.ಎಂ.ಇ.ಸೋಸೈಟಿ ಆಫ್ ನರ್ಸಿಂಗ್ ಇವರ ಸಹಯೋಗದಲ್ಲಿ ಶನಿವಾರ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಪಲ್ಸ್ ಪೋಲಿಯೋ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಎಲ್.ಆರ್.ಶಂಕರ್ ನಾಯ್ಕ್ ಚಾಲನೆ ನೀಡಿದರು.

ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಜೂನ್ 28ರ ಭಾನುವಾರದಂದು ಹಮ್ಮಿಕೊಳ್ಳಲಾಗಿರುವ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದಲ್ಲಿ 0 ಇಂದ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಲಸಿಕೆ ಹಾಕಿಸುವಂತೆ ಮನವಿ ಮಾಡಿದರು. ನೆರೆ ಜಿಲ್ಲೆ, ರಾಜ್ಯಗಳಿಂದ ಬಂದಿರುವ ಪ್ರಯಾಣಿಕರು ಹಾಗೂ ಸುತ್ತಮುತ್ತಲಿನ ನಿವಾಸಿಗಳು ತಮ್ಮ ಮಕ್ಕಳಿಗೆ ತಪ್ಪದೇ ಲಸಿಕೆ ಹಾಕಿಸುವಂತೆ ತಿಳಿಸಿದರು.

ನೂತನ ಕ್ಯೂಆರ್ ಕೋಡ್ ವ್ಯವಸ್ಥೆ: ಸಾರ್ವಜನಿಕರ ಅನುಕೂಲಕ್ಕಾಗಿ ಈ ಬಾರಿ ನೂತನ ತಂತ್ರಜ್ಞಾನವನ್ನು ಪರಿಚಯಿಸಲಾಗಿದ್ದು, ಇಲಾಖೆ ವತಿಯಿಂದ ನೀಡಲಾಗಿರುವ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡುವುದರ ಮೂಲಕ ಸಾರ್ವಜನಿಕರು ತಮ್ಮ ಹತ್ತಿರದ ಪೋಲಿಯೋ ಲಸಿಕಾ ಕೇಂದ್ರವನ್ನು ಸುಲಭವಾಗಿ ಪತ್ತೆ ಹಚ್ಚಬಹುದಾಗಿದೆ. ಇದರಿಂದ ಹತ್ತಿರದ ಪೋಲಿಯೋ ಲಸಿಕಾ ಕೇಂದ್ರಕ್ಕೆ ಭೇಟಿ ನೀಡಿ ಪೋಲಿಯೋ ಲಸಿಕೆ ಹಾಕಿಸಿಕೊಳ್ಳಬಹುದು. ದೇಶವನ್ನು ಸಂಪೂರ್ಣ ಪೋಲಿಯೋ ಮುಕ್ತವಾಗಿಸಲು ಸಾರ್ವಜನಿಕರು ಕೈಜೋಡಿಸಬೇಕು ಎಂದರು.

ಜಾಥಾದಲ್ಲಿ ಪಾಲ್ಗೊಂಡ ನರ್ಸಿಂಗ್ ವಿದ್ಯಾರ್ಥಿಗಳು ಲಸಿಕಾ ಅಭಿಯಾನದ ಬಿತ್ತಿಪತ್ರಗಳನ್ನು ಹಿಡಿದು ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ, ಘೋಷಣೆ ಕೂಗುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು. ಜಾಗೃತಿ ಜಾಥ ಕಾರ್ಯಕ್ರಮವು ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆ (ಹಳೇ ಆಸ್ಪತ್ರೆ ಆವರಣ) ಆರಂಭವಾಗಿ ನಂತರ ಪುಣ್ಯಮೂರ್ತಿ ಸರ್ಕಲ್, ಬಸ್ ನಿಲ್ದಾಣ, ಪುನೀತ್ ರಾಜ್ ಕುಮಾರ್ ಸರ್ಕಲ್, ಅಂಬೇಡ್ಕರ್ ಸರ್ಕಲ್, ರಾಮಾ ಟಾಕೀಸ್ ಮಾರ್ಗವಾಗಿ ಚಲಿಸಿ ದೊಡ್ಡ ಮಸೀದಿ ಮಾರ್ಗದಿಂದ ಪುನಃ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ಮುಕ್ತಾಯಗೊಂಡಿತು.

ಈ ವೇಳೆ ಜಿಲ್ಲಾ ಆರ್.ಸಿ.ಹೆಚ್. ಅಧಿಕಾರಿ ಡಾ. ಜಂಬಯ್ಯ, ಆರೋಗ್ಯ ನಿರೀಕ್ಷಣಾಧಿಕಾರಿ ಧರ್ಮನಗೌಡ, ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿ ಎಂ.ಪಿ.ದೊಡ್ಡಮನಿ, ತಾಲ್ಲೂಕು ವೈದ್ಯಾಧಿಕಾರಿ ಡಾ. ವಿನೋದ್ ಕುಮಾರ್ ಸೇರಿದಂತೆ ಆರೋಗ್ಯ ಇಲಾಖೆ ಸಿಬ್ಬಂದಿ, ವಿವಿಧ ನರ್ಸಿಂಗ್ ಕಾಲೇಜ್ ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಇದ್ದರು.



ಕಲಬುರಗಿ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಜಾಗೃತಿಗೆ ಪ್ರಗತಿಪರ ಸಂಘಟನೆಗಳಿಂದ ಕರೆ

ಜೇವರ್ಗಿ,ಜೂ.29-

ವಿಶೇಷ ಸಮಗ್ರ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಹಿನ್ನೆಲೆಯಲ್ಲಿ ಸಾರ್ವಜನಿಕರು ತಮ್ಮ ಮತದಾರರ ಹಕ್ಕುಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂದು ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಕರೆ ನೀಡಿದ್ದಾರೆ.

ಈ ಕುರಿತು ಜೇವರ್ಗಿಯ ನಿರೀಕ್ಷಣಾ ಮಂದಿರದಲ್ಲಿ ನಡೆದ ಸಭೆಯಲ್ಲಿ, ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ, ಸಾರ್ವಜನಿಕ ಜಾಗೃತಿ ಹಾಗೂ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಚರ್ಚಿಸಲಾಯಿತು. ಸಭೆಯಲ್ಲಿ ಮಾತನಾಡಿದ ಮುಖಂಡರು, ಪ್ರತಿಯೊಬ್ಬ ಅರ್ಹ ಮತದಾರರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಸರಿಯಾಗಿ ದಾಖಲಾಗಿದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳಬೇಕು ಎಂದು ತಿಳಿಸಿದರು. ಮನೆ ಮನೆ ಭೇಟಿ ನೀಡುವ ಸಮೀಕ್ಷಾ ಸಿಬ್ಬಂದಿಗೆ ಸರಿಯಾದ ಮಾಹಿತಿಯನ್ನು ನೀಡಿ, ಅಗತ್ಯ ದಾಖಲೆಗಳನ್ನು ಸಲ್ಲಿಸಿ ಅರ್ಜಿಗಳನ್ನು ಸರಿಯಾಗಿ ಭರ್ತಿ ಮಾಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಮತದಾರರ ಪಟ್ಟಿಯಿಂದ ಯಾವುದೇ ಅರ್ಹ ಮತದಾರರ ಹೆಸರು ಕೈಬಿಡದಂತೆ ನೋಡಿಕೊಳ್ಳುವಂತೆ ಹಾಗೂ ಈ ಕುರಿತು ವ್ಯಾಪಕ ಜಾಗೃತಿ ಮೂಡಿಸಲು ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಸಭೆಯ ಅಂತ್ಯದಲ್ಲಿ ಮಾತನಾಡಿದ ಮುಖಂಡರು, ಮತದಾನ ಹಕ್ಕು ಪ್ರತಿಯೊಬ್ಬ ನಾಗರಿಕನ ಸಂವಿಧಾನಬದ್ಧ ಹಕ್ಕಾಗಿದ್ದು, ಅದನ್ನು ರಕ್ಷಿಸುವ ಜವಾಬ್ದಾರಿ ಎಲ್ಲರ ಮೇಲೂ ಇದೆ ಎಂದು ಮನವಿ ಮಾಡಿದರು.

ಸಭೆಯಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಹೇಶ್ ಕುಮಾರ್ ರಾಠೋಡ್, ರೈತ ಮುಖಂಡ ಬಾಬು ಪಾಟೀಲ್, ರೈತ ಹೋರಾಟ ಸಮಿತಿಯ ಅಧ್ಯಕ್ಷ ಇಬ್ರಾಹಿಂ ಪಟೇಲ್ ಯಾಳವಾರ, ರಾಜ ಪಟೇಲ್, ದಲಿತ ಮುಖಂಡರಾದ ಮಲ್ಲಣ್ಣ ಕೊಡಚಿ, ಪುಂಡಲಿಕ ಗಾಯಕ್ವಾಡ, ಶ್ರೀಹರಿ ಕರಕಿಹಳ್ಳಿ, ರವಿ ಕುಳಗೇರಿ, ಮಹಮ್ಮದ್ ಕೊಡಚಿ, ಟಿಪ್ಪು ಸುಲ್ತಾನ್ ತಾಲೂಕು ಸಮಿತಿಯ ಅಧ್ಯಕ್ಷ ಮೊಯುನುದ್ದೀನ್ ಇನಾಮ್ದಾರ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

ಕಲಬುರಗಿ ನಗರಕ್ಕೆ ಸರಬರಾಜಾಗುವ ಕುಡಿಯುವ ನೀರಿನ ಸ್ಥಿತಿಗತಿ ಅವಲೋಕನ ಮಾಡಿದ ಶಾಸಕ ಅಲ್ಲಮಪ್ರಭು ಪಾಟೀಲ್



ಕಲಬುರಗಿ,ಜೂ.28-

ಮುಂಗಾರು ಮಳೆ ಕೈಕೊಟ್ಟ ಕಾರಣ ನಗರದಲ್ಲಿನ ಕುಡಿಯುವ ನೀರಿಗೆ ತುಂಬಾ ಸಮಸ್ಯೆ ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಅವರು ಕಲಬುರಗಿ ಮಹಾನಗರ ಪಾಲಿಕೆ ಮೇಯರ್ ವರ್ಷಾ ಜಾನೆ, ಉಪ ಮೇಯರ್ ತೃಪ್ತಿ ಲಾಖೆ ಹಾಗೂ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ ಅವರು ಸರಡಗಿ ಬ್ರಿಡ್ಜ್ ಕಂ ಬ್ಯಾರೇಜಿಗೆ ಭೇಟಿ ನೀಡಿ ಪ್ರಸ್ತುತ ಲಭ್ಯ ಇರುವ ನೀರಿನ ಪ್ರಮಾಣದ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಅಲ್ಲಮಪ್ರಭು ಪಾಟೀಲ ಅವರು, ಈ ಬಾರಿ ಮಳೆ ಕೈಕೊಟ್ಟ ಕಾರಣ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ಹೀಗಾಗಿ ಈಗಾಗಲೆ ನಾರಾಯಣಪುರ ಜಲಾಶಯದಿಂದ 0.5 ಟಿ.ಎಂ.ಸಿ. ನೀರು ಹರಿಬಿಡಲಾಗಿದ್ದು, ರವಿವಾರ ಅಥವಾ ಸೋಮವಾರ ಸರಡಗಿ ಬ್ಯಾರೇಜಿಗೆ ತಲುಪಲಿದೆ ಎಂದರು.

ಪ್ರತಿ ವರ್ಷ ಬೇಸಿಗೆಯಲ್ಲಿ ನಗರಕ್ಕೆ ಕುಡಿಯುವ ನೀರಿನ ಸಮಸ್ಯೆ ತಲೆದೋರುತ್ತಿದ್ದು, ನಾರಾಯಣಪುರ ಜಲಾಶಯದಿಂದ ಶಹಾಪುರ, ನಗನೂರ ಮಾರ್ಗವಾಗಿ ಹರಿಬಿಡುವ ನೀರು ನಮ್ಮಲ್ಲಿ ಬರುವಷ್ಟಿಗೆ ಹೆಚ್ಚಿನ ನೀರು ಭೂಮಿ ಪಾಲಾಗುತ್ತಿದೆ. ಇದರ ಬದಲಾಗಿ ನಾರಾಯಣಪುರದಿಂದ ನೇರವಾಗಿ ಸರಡಗಿಗೆ ನೀರು ಹರಿಸಿದಲ್ಲಿ ಹೆಚ್ಚಿನ ನೀರು ನಮಗೆ ಸಿಗಲಿದೆ. ಇದಕ್ಕಾಗಿ 1,850 ಕೋಟಿ ರೂ. ಮೊತ್ತದ ಡಿ.ಪಿ.ಆರ್ ಸಿದ್ದಪಡಿಸಿದ್ದು, ಅಂದುಕೊಂಡಂತೆ ಯೋಜನೆ ಅನುಷ್ಠಾನಕ್ಕೆ ಬಂದಲ್ಲಿ ಮುಂದಿನ ದಿನದಲ್ಲಿ ನಗರಕ್ಕೆ ಕುಡಿಯುವ ನೀರಿಗೆ ಶಾಶ್ವತ ಪರಿಹಾರ ದೊರೆಯಲಿದೆ ಎಂದರು.

ಇನ್ನು ಸರಡಗಿ ಬ್ಯಾರೇಜಿನಲ್ಲಿ 41 ವರ್ಷ ಹಳೆಯದ 900ಕ್ಕೂ ಹೆಚ್ಚಿನ ಸ್ಟಾಪ್ ಲಾಗ್ ಗೇಟ್ ನಲ್ಲಿ 600 ಹೊಸದಾಗಿ ಅಳವಡಿಸಿದೆ. 150 ದುರಸ್ತಿ ಮಾಡಿದ್ದು, ಇನ್ನುಳಿದ ಗೇಟ್ ಸಹ ಹೊಸದಾಗಿ ಅಳವಡಿಸಿ ಬೇಸಿಗೆಯಲ್ಲಿ ನೀರು ಪೋಲಾಗದಂತೆ ಎಚ್ಚರ ವಹಿಸಲಾಗುತ್ತಿದೆ. ಇದಲ್ಲದೆ ಶುದ್ಧ ಕುಡಿಯುವ ನೀರು ಪೂರೈಕೆ ಮತ್ತು ಹೆಚ್ಚಿನ ಸಂಗ್ರಹಣೆ ಸಾಮರ್ಥ್ಯ ಹೆಚ್ಚಿಸಲು ಬ್ಯಾರೇಜ್ ನಲ್ಲಿ ಹೂಳೆತ್ತುವ ಕಾಮಗಾರಿ ಸಹ ನಡೆಯುತ್ತಿದ್ದು, ಇವೆಲ್ಲ ಕೆಲಸ ಕಾರ್ಯಗಳಿಗೆ 5 ಕೋಟಿ ರೂ. ಖರ್ಚು ಮಾಡಲಾಗುತ್ತಿದೆ. ಇದರಿಂದ ಮುಂದಿನ ದಿನದಲ್ಲಿ ಶುದ್ಧ ಕುಡಿಯುವ ನೀರು ನಗರದ ಜನರಿಗೆ ಲಭ್ಯವಾಗಲಿದೆ ಎಂದರು.

ಇನ್ನು ಕಲಬುರಗಿ ಮಹಾನಗರದಲ್ಲಿ ಎಲ್ ಟಿ ಸಂಸ್ಥೆಯಿಂದ 24 ಗಂಟೆ ನಿರಂತರ ಕುಡಿಯುವ ನೀರು ಪೂರೈಕೆ ಸ್ಕೀಮ್ 'ಎ' ಯೋಜನೆಯಡಿ 700 ಕಿ.ಮೀ ಪೈಪ್ ಲೈನ್ ಕಾಮಗಾರಿ ನಡೆದಿದ್ದು, 'ಬಿ' ಸ್ಕೀಮ್ ನಲ್ಲಿ ಇನ್ನು 500 ಕಿ.ಮೀ ವಿಸ್ತರಣೆ ಮಾಡಲಾಗುತ್ತಿದೆ. ಇದರಿಂದ ನಗರದಾದ್ಯಂತ ನೀರು ಸರಬರಾಜು ಜಾಲ ವಿಸ್ತರಣೆಯಾಗಲಿದೆ. ಪ್ರಸ್ತುತ ಕಲಬುರಗಿ ದಕ್ಷಿಣ ಮತ್ತು ಉತ್ತರ ಕ್ಷೇತ್ರದಲ್ಲಿ ಎಲ್ಲಿಯೆ ಕುಡಿಯುವ ನೀರಿನ ಸಮಸ್ಯೆ ತಲೆದೋರಿದಲ್ಲಿ ಕೂಡಲೆ ನೀರು ಪೂರೈಕೆಗೆ ಸುಮಾರು 200 ಟ್ಯಾಂಕರ್ ಪಡೆಯಲು ಸಹ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಹೀಗಾಗಿ ಯಾವುದೇ ಕಾರಣಕ್ಕೂ ಕುಡಿಯುವ ನೀರಿನ ತೊಂದರೆಯಾಗದಂತೆ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ನಮ್ಮ ಸರ್ಕಾರ ತೆಗೆದುಕೊಂಡಿದೆ ಎಂದರು.

8 ದಿನಕ್ಕೆ ನೀರು ಲಭ್ಯ: ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ ಮಾತನಾಡಿ ಪ್ರಸ್ತುತ ಕಲಬುರಗಿ ನಗರಕ್ಕೆ ಮುಂದಿನ 8-10 ದಿನಗಳ ಕಾಲ ನೀರು ಪೂರೈಕೆಗೆ ನೀರಿನ ಪ್ರಮಾಣ ಲಭ್ಯ ಇದೆ. ನಾರಾಯಣಪುರ ಜಲಾಶಯದಿಂದ ನೀರು ಹರಿಬಿಟ್ಟಿದ್ದು, ಒಂದೆರಡು ದಿನ ಬ್ಯಾರೇಜಿಗೆ ನೀರು ಬಂದು ಸೇರಲಿದ್ದು, ಅಲ್ಲಿಗೆ ಸದ್ಯದ ಮಟ್ಟಿಗೆ ಕುಡಿಯುವ ನೀರು ಪೂರೈಕೆಗೆ ಯಾವುದೇ ಸಮಸ್ಯೆ ಇಲ್ಲ. ಕಳೆದ ವರ್ಷ ಅತಿವೃಷ್ಠಿ, ಈ ವರ್ಷ ಒಂದು ತಿಂಗಳು ಕಳೆದರು ನೀರಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಕುಡಿಯುವ ನೀರು ಪೂರೈಕೆ ನಮಗೆ ಸವಾಲಾಗಿದೆ. ಹವಾಮಾನ ಇಲಾಖೆ ಮುನ್ಸೂಚನೆಯಂತೆ ಒಂದೆರಡು ದಿನದಲ್ಲಿ ಮಳೆಯಾಗುವ ಸಾಧ್ಯತೆ ಇದ್ದು, ವರುಣನ ಆಗಮನಕ್ಕೆ ಕಾತುರರಾಗಿದ್ದೇವೆ ಎಂದು ಆಶಾಭಾವನೆ ವ್ಯಕ್ತಪಡಿಸಿದರು.

ಕಲಬುರಗಿ ಮಹಾನಗರದಲ್ಲಿ ಕುಡಿಯುವ ನೀರಿನ ಪೂರೈಕೆಗೆ ಚರಂಡಿ ನೀರು ಸೇರದಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ರಸ್ತೆ, ಬಿ.ಎಸ್.ಎನ್.ಎಲ್., ವಿದ್ಯುತ್ ಕಾಮಗಾರಿ ಕೈಗೊಳ್ಳುವವರಿಗೂ ರಸ್ತೆ ನಿರ್ಮಾಣ ಮಾಡುವ ಮುನ್ನವೆ ಇವೆಲ್ಲ ಕೆಲಸಗಳನ್ನು, ದುರಸ್ತಿ ಕಾರ್ಯಗಳನ್ನು ಮಾಡಿಕೊಳ್ಳುವಂತೆ ಅನಗತ್ಯ ರಸ್ತೆ ತೋಡುವುದನ್ನು ತಡೆಯಲು ಸೂಚಿಸಲಾಗಿದೆ. ಎನ್.ಎಂ.ಪಿ.ಸಿ, 15ನೇ ಹಣಕಾಸು ಯೋಜನೆಯಡಿ ಬೇಡಿಕೆ ಇದ್ದ ಕಡೆ 60-70 ಬೋರವೆಲ್ ಕೊರೆಯಲು ಸಹ ಯೋಜನೆ ರೂಪಿಸಿದೆ ಎಂದು ಅವಿನಾಶ ಶಿಂಧೆ ತಿಳಿಸಿದರು.

ಕೆ.ಯು.ಐ.ಡಿ.ಎಫ್.ಸಿ ಅಧೀಕ್ಷಕ ಅಭಿಯಂತ ಆರ್.ಪಿ.ಜಾಧವ, ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆ ಇಲಾಖೆಯ ಎ.ಇ.ಇ. ರಾಜಶೇಖರ ಸಜ್ಜನಶೆಟ್ಟಿ ಸೇರಿದಂತೆ ಇತರೆ ಅಧಿಕಾರಿಗಳಿದ್ದರು.

ಒಂದನೇಯ ಪುಟದಿಂದ

ರಿಪೋರ್ಟರ್ಸ್ ಗಿಲ್ಡ್ ಕಥೆ-ಕವನ ಫಲಿತಾಂಶ ಪ್ರಕಟ

ಕಾರ್ಯನಿರ್ವಹಿಸಿದ್ದಾರೆ. ಆಗಸ್ಟ್ ತಿಂಗಳ ಕೊನೆಯ ವಾರದಲ್ಲಿ ನಡೆಯುವ ರಾಯಚೂರು ರಿಪೋ ರ್ಟರ್ಸ್ ಗಿಲ್ಡ್ ಬೆಳ್ಳಿ ಮಹೋತ್ಸ ವದಲ್ಲಿ ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಅಲ್ಲದೇ ಆಯ್ಕೆಯಾದ ಕಥೆ-ಕವನಗಳನ್ನು ಪುಸ್ತಕ ರೂಪದಲ್ಲೂ ಪ್ರಕಟಿಸಲಾ ಗುವುದು.

ಪತ್ರಿಕಾಗೋಷ್ಠಿಯಲ್ಲಿ ವೆಂಕಟೇ ಶ್ ಹೂಗಾರ್, ಶ್ರೀಕಾಂತ್ ಸಾವೂರ್, ಚನ್ನಬಸವ ಬಾಗಲವಾಡ, ಖಾನ್ ಸಾಬ್ ಮೊಮೀನ್ ಹಾಗೂ ಆನಂದ್ ಉಪಸ್ಥಿತರಿದ್ದರು.

''ಮೂರು ಜೀವ ತಿಂದ ಬಿಲ್ಡಿಂಗ್'' ಸಮಗ್ರ ತನಿಖೆಗೆ ಹನುಮಂತಪ್ಪ ಆಗ್ರಹ

ಸಂಬಂಧಿತ ನಿಯಮಗಳ ಅನುಸರಣೆ ನಡೆದಿತ್ತೇ ಎಂಬುದನ್ನು ಪರಿಶೀಲಿಸಿ, ತನಿಖೆಯಲ್ಲಿ ಯಾರಾದರೂ ನಿರ್ಲಕ್ಷ್ಯ ಅಥವಾ ನಿಯಮ ಉಲ್ಲಂಘನೆ ಕಂಡುಬಂದಲ್ಲಿ ಅವರ ವಿರುದ್ಧ ಕಾನೂನುಬದ್ಧ ಮತ್ತು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಮೃತರ ಕುಟುಂಬಗಳಿಗೆ ಸರ್ಕಾರ ಸೂಕ್ತ ಪರಿಹಾರ, ಅಗತ್ಯ ನೆರವು ಹಾಗೂ ಮಾನವೀಯ ಬೆಂಬಲ ನೀಡಬೇಕು. ಜೊತೆಗೆ ಬಾಧಿತ ಕುಟುಂಬಗಳ ಕಣ್ಣೀರು ಒರೆಸುವ ಕೆಲಸ ತಾಲೂಕು ಆಡಳಿತ ಮತ್ತು ಸರ್ಕಾರ ಮಾಡಬೇಕು ಎಂದು ಅವರು ಹೇಳಿದರು.

ಸ್ಥಳೀಯ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ ನಾಯಕ ಅವರು ಆಸ್ಪತ್ರೆಗೆ ಭೇಟಿ ನೀಡಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿರುವುದಾಗಿ ತಿಳಿದುಬಂದಿದೆ.

ದುರಂತದ ಸಂಪೂರ್ಣ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಿ, ಇಂತಹ ಘಟನೆಗಳು ಮರುಕಳಿಸದಂತೆ ಕಟ್ಟಡ ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಹನುಮಂತಪ್ಪ ಮನ್ನಾಪೂರಿ ಆಗ್ರಹಿಸಿದರು.

ಅಗ್ನಿವೀರ ತರಬೇತಿ ಪೂರ್ಣಗೊಳಿಸಿ ಸ್ವಗ್ರಾಮಕ್ಕೆ ಆಗಮಿಸಿದ ಯೋಧನಿಗೆ ಅದ್ದೂರಿ ಸ್ವಾಗತ

ಯುವ ಪೀಳಿಗೆ ದೇಶದ ರಕ್ಷಣೆ ಹಾಗೂ ರಾಷ್ಟ್ರ ಸೇವೆಯತ್ತ ಹೆಚ್ಚಿನ ಆಸಕ್ತಿ ಬೆಳೆಸಿಕೊಳ್ಳಬೇಕು. ದೇಶಕ್ಕಾಗಿ ಸೇವೆ ಸಲ್ಲಿಸುವ ಯೋಧರ ತ್ಯಾಗ ಮತ್ತು ಸಮರ್ಪಣೆ ಪ್ರತಿಯೊಬ್ಬರಿಗೂ ಮಾದರಿಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಗ್ರಾಮದ ಯುವಕ ಸೇನೆ ಸೇರಿರುವುದು ಇತರ ಯುವಕರಿಗೂ ಪ್ರೇರಣೆಯಾಗಿದ್ದು, ದೇಶಭಕ್ತಿಯ ಭಾವನೆ ಮತ್ತಷ್ಟು ಗಟ್ಟಿಗೊಳಿಸಿದೆ ಎಂದು ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಯೋಧನ ತಂದೆ ಬಸ್ಮಾಸೂರ ನಾಯಕ ಬೊಮ್ಮನಾಳ, ಮಹಾದೇವ ಉತ್ತರಭೂಪ, ಶಿಕ್ಷಕ ರಾಘವೇಂದ್ರ ನಾಯಕ ಗುಂಜಳ್ಳಿ, ಪತ್ರಕರ್ತ ಲಕ್ಷ್ಮಣರಾವ್ ಕಪಗಲ್, ಕರ್ಣ ನಾಯಕ ಬೊಮ್ಮನಾಳ, ನಾಗರಾಜ ನಾಯಕ ಬೋಮ್ಮನಾಳ, ಮಹಾದೇವ ಛಲುವಾದಿ, ಯೋಧನ ಸಹೋದರ ಭೀಮ ನಾಯಕ ಬೊಮ್ಮನಾಳ, ರತ್ನಕರ ನಾಯಕ, ಸ್ವಾಮಿ ಮಡಿವಾಳ ಸೇರಿದಂತೆ ಅನೇಕರು ಇದ್ದರು

ಚಿಕ್ಕಸೂಗೂರು ಮನೆಕಳ್ಳತನ ಪ್ರಕರಣ ಭೇದಿಸಿದ ಗ್ರಾಮೀಣ ಪೊಲೀಸರು: ಇಬ್ಬರು ಆರೋಪಿಗಳ ಬಂಧನ

ಗ್ರಾಮೀಣ ಪೊಲೀಸ್ ಠಾಣೆಯ ಪಿಎಸ್‌ಐಗಳು ಮತ್ತು ಸಿಬ್ಬಂದಿ ಒಳಗೊಂಡ ವಿಶೇಷ ತಂಡದಿಂದ ನಡೆಸಲಾಯಿತು.

ಪ್ರಕರಣ ಭೇದಿಸಿ ಆರೋಪಿಗಳನ್ನು ಬಂಧಿಸಿದ ತಂಡದ ಕಾರ್ಯವನ್ನು ಪೊಲೀಸ್ ಅಧೀಕ್ಷಕರು ಪ್ರಶಂಸಿಸಿ ಅಭಿನಂದಿಸಿದ್ದಾರೆ.

ಮತದಾರರು ಬೂತ್ ಮಟ್ಟದ ಅಧಿಕಾರಿಗಳಿಗೆ ಸಂಪೂರ್ಣ ಸಹಕಾರ ನೀಡಿ: ಜಿಲ್ಲಾ ಚುನಾವಣಾಧಿಕಾರಿ ಪೂವಿತಾ

ಅಥವಾ ಸಂಬಧಪಟ್ಟ ಬಿಎಲ್‌ಒಗಳ ಬಳಿ ಪರಿಶೀಲಿಸಿಕೊಳ್ಳಬಹುದು.

ಹೆಸರು ಸೇರ್ಪಡೆ, ತಿದ್ದುಪಡಿ ಹಾಗೂ ಇತರೆ ಅರ್ಜಿಗಳು: ನಮೂನೆ-6 ಹೊಸ ಮತದಾರರ ನೋಂದಣಿ. ನಮೂನೆ-6ಎ ವಿದೇಶದಲ್ಲಿರುವ ಭಾರತೀಯ ಮತದಾರರ ನೋಂದಣಿ. ನಮೂನೆ-7 ಮತದಾರರ ಹೆಸರು ಅಳಿಸುವಿಕೆ. ನಮೂನೆ-8 ವಿವರಗಳ ತಿದ್ದುಪಡಿ, ವಿಳಾಸ ಬದಲಾವಣೆ, ಎಪಿಕ್ ಬದಲಾವಣೆ ಹಾಗೂ ಪಿಡಬ್ಲ್ಯೂಡಿ ಗುರುತಿಸುವಿಕೆಯನ್ನು ಮಾಡಲಾಗುವುದು. ಅರ್ಜಿಗಳನ್ನು ಸಂಬಧಿಸಿದ ಬಿಎಲ್‌ಒ ಮುಖಾಂತರ ಅಥವಾ ಇಸಿಐ ನೆಟ್ ಮೊಬೈಲ್ ಆ್ಯಪ್ ಮತ್ತು ಮೂಲಕ ಆನ್‌ಲೈನ್‌ನಲ್ಲಿಯೂ ಅರ್ಜಿ ಸಲ್ಲಿಸಬಹುದಾಗಿದೆ.

ರಾಯಚೂರು ಜಿಲ್ಲೆಯ ಎಲ್ಲಾ ಅರ್ಹ ಮತದಾರರು (ನಾಗರಿಕರು) ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್-2026) ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಬೂತ್ ಮಟ್ಟದ ಅಧಿಕಾರಿಗಳಿಗೆ ಸಂಪೂರ್ಣ ಸಹಕಾರ ನೀಡುವಂತೆ ಹಾಗೂ ತಮ್ಮ ಮತ್ತು ತಮ್ಮ ಕುಟುಂಬದ ಎಲ್ಲ ಅರ್ಹ ಸದಸ್ಯರ ಹೆಸರುಗಳು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ಸಂಬಧಿಸಿದ ಚುನಾವಣಾ ನೋಂದಣಾಧಿಕಾರಿ (ಇಆರ್‌ಒ), ಸಹಾಯಕ ಚುನಾವಣಾ ನೋಂದಣಾಧಿಕಾರಿ (ಎಇಆರ್‌ಒ), ಬೂತ್ ಮಟ್ಟದ ಅಧಿಕಾರಿ (ಬಿಎಲ್‌ಒ) ಅವರನ್ನು ಸಂಪರ್ಕಿಸಬಹುದು ಅಥವಾ 1950 ಮತದಾರರ ಸಹಾಯವಾಣಿಗೆ ಕರೆ ಮಾಡಬಹುದಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುಣಮಟ್ಟದ ಕಾಮಗಾರಿ ಮಾಡಬೇಕು ಇಲ್ಲವಾದರೆ ಗುತ್ತೇದಾರರನ್ನು ಕಪ್ಪು ಪಟ್ಟಿಗೆ- ಬಸವನಗೌಡ ಬಾದರ್ಲಿ

ಎಂದು ಹೇಳಿದರು. ಜಿಲ್ಲಾಸ್ಪತ್ರೆ ಕಾಮಗಾರಿ ಕಳಪೆಯಾಗಿ ಸಾಗುತ್ತಿದ್ದು ವೈದ್ಯಾಧಿಕಾರಿಗಳು ನಿರ್ಲಕ್ಷ ತೋರಿದ್ದಾರೆ. ಕಾಮಗಾರಿಯ ಮೇಲುಸ್ತು ವಾರಿ ವಹಿಸಿ ನಿಗಾ ವಹಿಸಬೇಕಿದ್ದ ವೈದ್ಯರು ಬೇಜವಾಬ್ದಾರಿತನದಿಂದ ನಿರ್ಲಕ್ಷ ವಹಿಸಿದ್ದಾರೆ. ಎಂದು ಸ್ಥಳೀಯರು ಅಪಾದಿಸಿದರು. ಇದೇ ಸಂದರ್ಭದಲ್ಲಿ ಸ್ಥಳದಲ್ಲಿದ್ದ ಸರಕಾರಿ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ. ಡಾ. ಸುರೇಶ್ ಗೌಡ. ಹಾಗೂ ತಾಲೂಕ ಆರೋಗ್ಯ ಅಧಿಕಾರಿ ಡಾ. ಅಯ್ಯನಗೌಡ. ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಜನರ ಆರೋಗ್ಯ ಸೇವೆಗೆ ಮಹತ್ವದ ಯೋಜನೆಯಾಗಿರುವ ಈ ಆಸ್ಪತ್ರೆ ಶಾಶ್ವತ ಹಾಗೂ ಗುಣಮಟ್ಟದ ನಿರ್ಮಾಣವಾಗಬೇಕು. ಈ ಉದ್ದೇಶದಿಂದ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು.

''ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದಿಂದ ವಿಜಯೇಂದ್ರನನ್ನ ಕಿಕ್ ಔಟ್ ಮಾಡಬೇಕು'' : ಆಡಿಯೋ ವೈರಲ್

ಬೆಂಗಳೂರು,ಜೂ.29- ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷ ಸ್ಥಾನದಿಂದ ಕಿತ್ತು ಹಾಕಿ ಎಂದು ಕೇಂದ್ರದ ಮಾಜಿ ಸಚಿವ ಡಿ.ವಿ.ಸದಾನಂದಗೌಡ ಅನಾಮಧೇಯ ವ್ಯಕ್ತಿಯೊಬ್ಬರ ಜೊತೆ ನಡೆಸಿರುವ ಆಡಿಯೋ ಸಂಭಾಷಣೆ ಭಾರೀ ವಿವಾದ ಸೃಷ್ಟಿಸಿದೆ.

ಕೇಂದ್ರದ ಪ್ರಮುಖ ವ್ಯಕ್ತಿಯೊಬ್ಬರ ಜೊತೆ ಸುಮಾರು 3 ನಿಮಿಷಗಳ ಕಾಲ ದೂರವಾಣಿ ಮೂಲಕ ಮಾತನಾಡಿರುವ ಈ ಆಡಿಯೋ ವೈರಲ್ಲಾಗಿದ್ದು, ಪಕ್ಷದಲ್ಲಿ ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲು ಪಿತೂರಿ ನಡೆಯುತ್ತಿದೆ ಎಂಬುದಕ್ಕೆ ಇದು ಪುಷ್ಟಿ ಒದಗಿಸಿದೆ.

ಅಧ್ಯಕ್ಷ ಸ್ಥಾನದಿಂದ ವಿಜಯೇಂದ್ರ ಅವರನ್ನು ಕಿತ್ತು ಹಾಕಿ ಜೂನ್, ಜುಲೈ, ಆಗಸ್ಟ್ ತಿಂಗಳು ಮುಗಿದ ನಂತರ ಅವರ ಅಧ್ಯಕ್ಷ ಸ್ಥಾನದ ಅವಧಿ ಮುಗಿಯಲಿದೆ. ಅಲ್ಲಿಯ ತನಕ ಕಾದು ಬಿವೈವಿ ಅವರನ್ನು ಕಿಕ್ ಔಟ್ ಮಾಡಿ ಎಂದು ಡಿವಿಎಸ್ ಮಾತನಾಡಿದ್ದಾರೆ.

ಎರಡು ತಿಂಗಳು ನಾವು ಕಾಯೋಣ. ನವೆಂಬರ್‌ಗೆ ಹೇಗಿದ್ದರೂ ವಿಜಯೇಂದ್ರ ಅವಧಿ ಮುಗಿಯಲಿದೆ. ಅವರು ಕಿಕ್ ಔಟ್ ಆದರೆ ಎಲ್ಲಾ ಸಮಸ್ಯೆಗಳು ಇತ್ಯರ್ಥವಾಗಲಿದೆ. ಅನಗತ್ಯವಾಗಿ ಇದು ನಾವೇಕೆ ಗೊಂದಲ ಸೃಷ್ಟಿಸಿಕೊಳ್ಳೋಣ. ಹೈಕಮಾಂಡ್ ನಾಯಕರು ಸೂಕ್ತ ಕಾಲದಲ್ಲಿ ಸೂಕ್ತ ನಿರ್ಧಾರವನ್ನು ತೆಗೆದುಕೊಳ್ಳುತ್ತಾರೆಂದು ಹೇಳಿದ್ದಾರೆ.

ಈಗಲೇ ಕಿತ್ತು ಹಾಕಿದರೆ ನಾವು ಲಿಂಗಾಯಿತರ ವಿರೋಧಿ ಎಂದು ಸಾಬೀತಾಗುತ್ತದೆ. ನವೆಂಬರ್‌ನಲ್ಲಿ ಅಧಿಕಾರ ಮುಗಿಯುತ್ತಿದ್ದಂತೆ ಕಿತ್ತು ಹಾಕಿಬಿಡಿ. ಆಗ ಯಾವ ಗೊಂದಲವೂ ಇರುವುದಿಲ್ಲ ಎಂದಿದ್ದಾರೆ.

ವಿಜಯೇಂದ್ರ ಮುಂದುವರೆಯುವುದರಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಮತ್ತು ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಕಡಿವಾಡ ಇದೆಯೇ ಎಂದು ಅನಾಮಧೇಯ ವ್ಯಕ್ತಿ ಕೇಳಿದಾಗ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಆಟವಾಡುತ್ತಿದ್ದಾರೆ. ನೋಡೋಣ ಏನಾಗುತ್ತದೆ ಎಂದು ಡಿವಿಎಸ್ ಹೇಳಿದ್ದಾರೆ.

ನಾನು ದೇವರನ್ನು ನಂಬುವ ವ್ಯಕ್ತಿ. ಈಗಲೂ ನಾನು ಹೋದರೆ ಬಸ್ ನಿಲ್ದಾಣ, ಆಟೋ ಸ್ಟಾಂಡ್‌ಗಳಲ್ಲಿ 40ರಿಂದ 50 ಸಾವಿರ ಜನ ಸೇರುತ್ತಾರೆ ಎನ್ನುವ ಮೂಲಕ ಪರೋಕ್ಷವಾಗಿ ತಾವು ಅಧ್ಯಕ್ಷ ಸ್ಥಾನಕ್ಕೆ ಸಿದ್ದ ಎಂದು ಹೇಳಿಕೊಂಡಿದ್ದಾರೆ. ನಾನು ಈ ಹಿಂದೆ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಿದ್ದೇನೆ. ಆಗ ನಾನು ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗಿದ್ದೆ. ಈಗ ಎಲ್ಲವೂ ವಿರುದ್ಧವಾಗಿ ನಡೆಯುತ್ತಿವೆ ಎಂದು ಡಿವಿಎಸ್ ಅನಾಮಧೇಯ ವ್ಯಕ್ತಿಗೆ ಹೇಳಿದ್ದಾರೆ.

ಬಸವಾದಿ ಶಿವಶರಣರ ಹಿಂದೂ ಸಮಾವೇಶ ವಿರೋಧಿಸಿ ಪ್ರತಿಭಟನೆ



ಬೀದರ್,ಜೂ.29-

ಕನ್ನೇರಿ ಸ್ವಾಮಿಯ ನೇತೃತ್ವದ ಬಸವಾದಿ ಶಿವ ಶರಣರ ಹಿಂದೂ ಸಮಾವೇಶ ವಿರೋಧಿಸಿ ಕರ್ನಾಟಕದ ಹಲವಾರು ಜಿಲ್ಲೆ, ಮಹಾರಾಷ್ಟ್ರ ಹಾಗೂ ಹೈದರಾಬಾದ್ ನಿಂದ ಬಂದ ಬಸವ ಅನುಯಾಯಿಗಳಿಂದ ಪ್ರತಿಭಟನೆ ನಡೆಸಿದರು.

ಬಸವಕಲ್ಯಾಣದ ಹೊರ ವಲಯದಲ್ಲಿರುವ ಬಂಗಲಾದ ಹತ್ತಿರವಿರುವ ರಾಷ್ಟ್ರೀಯ ಹೆದ್ದಾರಿ-65 ರ ಮೇಲೆ ರವಿವಾರ ಪ್ರತಿಭಟನೆ ನಡೆಸಿ, ಬಸವಾದಿ ಶಿವ ಶರಣರ ಹಿಂದೂ ಸಮಾವೇಶ, ಕನ್ನೇರಿ ಸ್ವಾಮಿ ಹಾಗೂ ಆರ್ ಎಸ್ ಎಸ್ ವಿರುದ್ಧ ಘೋಷಣೆ ಕೂಗಿದರು.

ಈ ವೇಳೆ ಡಾ. ಮೀನಾಕ್ಷಿ ಬಾಳಿ ಅವರು ಮಾತನಾಡಿ, ಬಸವ ಧರ್ಮ ಶೂದ್ರ, ದುಡಿಯುವವರ ಧರ್ಮವಾಗಿದೆ. ಈ ಬಸವಾದಿ ಶಿವ ಶರಣರ ಹಿಂದೂ ಸಮಾವೇಶವು ಆರ್ ಎಸ್ ಎಸ್ ನವರು ಮಾಡುತ್ತಿದ್ದಾರೆ. ಅವರು ವೇದಕ್ಕೆ ಒರೆಯ ಕಟ್ಟುವೆ ಎನ್ನುವ ವಚನ ಹೇಳುವುದಿಲ್ಲ. ಶಾಸ್ತ್ರಗಳು ಹೆಣ್ಣು, ಅಸ್ಪೃಶ್ಯರು ಕನಿಷ್ಠ ಬ್ರಾಹ್ಮಣರು ಶ್ರೇಷ್ಠ ಎಂದು ಹೇಳುತ್ತವೆ. ನಮಗೆ ಬಾಬಾಸಾಹೇಬರು ನೀಡಿದ ಸಂವಿಧಾನದಿಂದಲೇ ಅಕ್ಷರ ಸಿಕ್ಕಿದೆ. ಬುದ್ಧ, ಬಸವಣ್ಣ ಹಾಗೂ ಅಂಬೇಡ್ಕರ್ ಅವರ ತತ್ವಗಳ ಮೇಲೆ ನಡೆಯುವವರಾಗಿದ್ದೇವೆ ಎಂದರು.

ಮುಂದಿನ ದಿನಗಳಲ್ಲಿ ತತ್ವಕ್ಕೆ ಬದ್ಧರಾದವರಿಗೆ ಮಾತ್ರ ನಮ್ಮ ಮತದಾನವಿರುತ್ತದೆ. 2027ರಲ್ಲಿ ಸನಾತನಿಗಳು ಬಸವ ಭಾರತ ಉತ್ಸವ ಎನ್ನುವ ನಾಟಕ ತೆಗೆದುಕೊಂಡು ಬರುತ್ತಿದ್ದಾರೆ. ಹಾಗಾಗಿ ಎಚ್ಚರದಿಂದ ಇರಬೇಕು. ಇಲ್ಲಿನ ನಮ್ಮ ಸ್ವಾಮೀಜಿಗಳಿಗೆ ಅರ್ಥ ಆಗುವುದಿಲ್ಲ. ಸ್ವಾಮಿಗಳು ಯಾವುದಾದರು ಒಂದು ಕಡೆಗೆ ಇರಬೇಕು. ಸನಾತನಿಗಳ ಕಡೆಗೆ ಇದ್ದರೆ ನಮ್ಮನ್ನು ಬಿಡಬೇಕು. ನಮ್ಮನ್ನು ಬಿಟ್ಟರೆ ಸನಾತನಿಗಳ ಜೊತೆಗೆ ಹೋಗಬೇಕು. ಎರಡು ಕಡೆಗೆ ಇರುವುದು ಚೆನ್ನಾಗಿರುವುದಿಲ್ಲ ಎಂದು ಇಲ್ಲಿನ ಮಠಾಧೀಷರ ವಿರುದ್ಧ ಕಿಡಿಕಾರಿದರು.

ಹೋರಾಟಗಾರ್ತಿ ಕೆ. ನೀಲಾ ಅವರು ಮಾತನಾಡಿ, ರಾಜ್ಯ ಸರಕಾರ ಸಾಂಸ್ಕೃತಿಕ ನಾಯಕ ಎಂದು ಬಸವಣ್ಣನವರನ್ನು ಘೋಷಣೆ ಮಾಡಿದೆ. ಆರ್ ಎಸ್ ಎಸ್ ನವರು ಇಂತಹ ಸಮಾವೇಶ ಮಾಡುವುದನ್ನು ಕೂಡ ಸರ್ಕಾರ ತಡೆಯಬೇಕು. ಬಸವಕಲ್ಯಾಣವನ್ನು ಪುರೋಹಿತಶಾಹಿಯನ್ನಾಗಿ ಮಾಡುವ ಹುನ್ನಾರ ಇದೆ. ಇದನ್ನು ಆಗಲು ನಾವು ಬಿಡಬಾರದು ಎಂದು ಗುಡುಗಿದರು.

ಇಡೀ ಜಗತ್ತಿನ ಮೊದಲ ಭಯೋತ್ಪಾದಕ ಸನಾತನವಾದಿಗಳಾಗಿದ್ದಾರೆ. ಅವರೇ ಕಲ್ಯಾಣದಲ್ಲಿ ಹರಳಯ್ಯ ಮಧುವರಸ ದಂಪತಿಗಳಿಗೆ ಆನೆ ಕಾಲಿಗೆ ಕಟ್ಟಿ ಎಳೆದರು. ಅಂದಿನ ದಿನಗಳಲ್ಲಿ ಸನಾತನಿಗೆ ಶರಣರು ಹೆದರಲಿಲ್ಲ. ಆದರೆ ಇಂದಿನ ಕೆಲ ಮಠಾಧೀಶರು ಸನಾತನಿಗಳ ಸಂಧಾನ ಮಾಡಿಕೊಂಡಿದ್ದಾರೆ. ಇವರು ಸಂಧಾನ ಯಾಕೆ ಮಾಡಿಕೊಂಡರು? ಬಸವಾದಿ ಶರಣರ ಹಿಂದೂ ಸಮಾವೇಶದ ವಿರುದ್ಧ ಹೋರಾಟ ಯಾಕೆ ಹಿಂದಕ್ಕೆ ತೆಗೆದುಕೊಳ್ಳಲಾಯಿತು ಎಂದು ಇಲ್ಲಿನ ಮಠಾಧೀಶರಿಗೆ ಖಾರವಾಗಿ ಪ್ರಶ್ನೆ ಮಾಡಿದರು.

ಈ ವೇಳೆ ಬಸವರಾಜ್ ಬುಳ್ಳಾ, ಪ್ರೊ. ಆರ್. ಕೆ ಹುಡಗಿ, ಆರ್. ಜಿ ಶೇಟಕಾರ್ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಚನ್ನಬಸವ, ಮಾರುತಿ ಗೋಖಲೆ, ರವಿ ಪಾಪಡೆ, ಸಿದ್ರಾಮ್ ಶೇಟಗಾರ್, ಬಸವ ಪಾಟೀಲ್, ರವೀಂದ್ರ ಕೊಳಕೂರ್, ವಿಜಯಲಕ್ಷ್ಮಿ ಗಡ್ಡೆ, ಸಿದ್ದಪ್ಪ ಮೂಲಗೆ, ಬಾದರ್ಲಿ, ಗಗನ್ ಫುಲೆ, ಶಶಿಕಾಂತ್ ಡಾಂಗೆ, ನಾಗಾರ್ಜುನ್ ಹಾಗೂ ವೀಣಾ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಕಲಬುರಗಿ ನೆರವು ಸಮಾಜ ಸೇವಾ ಟ್ರಸ್ಟ್ ವತಿಯಿಂದ ಉಚಿತ ನೋಟ್‌ಬುಕ್ ವಿತರಣೆ

ಅಫಜಲಪುರ,

ತಾಲೂಕಿನ ಅತನೂರ ಗ್ರಾಮದ ಶ್ರೀ ರೇವಣಸಿದ್ದೇಶ್ವರ ಶಾಲೆಯಲ್ಲಿ ನೆರವು ಸಮಾಜ ಸೇವಾ ಟ್ರಸ್ಟ್ (ರಿ) ವತಿಯಿಂದ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ನೋಟ್‌ಬುಕ್ ಹಾಗೂ ಪೆನ್ನು ವಿತರಣೆ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮಕ್ಕೆ ಶ್ರೀ ರೇವಣಸಿದ್ದೇಶ್ವರ ಸಂಸ್ಥೆಯ ಅಧ್ಯಕ್ಷ ದೇಸು ರಾಠೋಡ ಚಾಲನೆ ನೀಡಿ ಮಾತನಾಡಿ, ಶಿಕ್ಷಣವೇ ಪ್ರತಿಯೊಬ್ಬ ಮಗುವಿನ ಬದುಕನ್ನು ಬದಲಾಯಿಸುವ ಅತ್ಯಂತ ದೊಡ್ಡ ಶಕ್ತಿ. ಆರ್ಥಿಕವಾಗಿ ಹಿಂದುಳಿದಿರುವ ಕಾರಣಕ್ಕೆ ಯಾವುದೇ ಮಗುವಿನ ಶಿಕ್ಷಣ ನಿಲ್ಲಬಾರದು ಎಂಬ ಉದ್ದೇಶದಿಂದ ಟ್ರಸ್ಟ್ ಈ ಸಮಾಜಮುಖಿ ಕಾರ್ಯವನ್ನು ಕೈಗೊಂಡಿದೆ. ಮುಂದಿನ ದಿನಗಳಲ್ಲಿಯೂ ಟ್ರಸ್ಟ್ ಇನ್ನಷ್ಟು ಸಮಾಜ ಸೇವಾ ಕಾರ್ಯಗಳನ್ನು ನಡೆಸಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ನೆರವು ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಸಿದ್ದರಾಮ ಎಸ್. ಶಿವಣಗಿ ಮಾತನಾಡಿ, ನಾವು ನೀಡುತ್ತಿರುವ ನೋಟ್‌ಬುಕ್ ಮತ್ತು ಪೆನ್ನು ಕೇವಲ ವಸ್ತುಗಳಲ್ಲ; ಅವು ವಿದ್ಯಾರ್ಥಿಗಳ ಕನಸುಗಳನ್ನು ಬರೆಯುವ ಸಾಧನಗಳು. ಮಕ್ಕಳು ಉತ್ತಮ ಶಿಕ್ಷಣ ಪಡೆದು ಸಮಾಜಕ್ಕೆ ಮಾದರಿಯಾದ ಪ್ರಜೆಗಳಾಗಿ ಬೆಳೆಯಬೇಕು. ಅವರ ಯಶಸ್ಸೇ ಟ್ರಸ್ಟ್‌ಗೆ ಸಿಗುವ ದೊಡ್ಡ ಗೌರವ. ಮುಂದಿನ ದಿನಗಳಲ್ಲಿಯೂ ಶಿಕ್ಷಣ, ಆರೋಗ್ಯ ಹಾಗೂ ಸಮಾಜಮುಖಿ ಸೇವೆಗಳ ಮೂಲಕ ಇನ್ನಷ್ಟು ಜನರಿಗೆ ನೆರವಾಗುವ ಸಂಕಲ್ಪ ನಮ್ಮ ಟ್ರಸ್ಟ್ ಹೊಂದಿದೆ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಸುರೇಶ ಜಮಾದಾರ, ಅಂಬಿಕಾ, ಅಶ್ವಿನಿ ಕರಜಗಿ, ಚಂದ್ರು ಉಪ್ಪಾರ ಸೇರಿದಂತೆ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಟ್ರಸ್ಟ್ ಸದಸ್ಯರು ಉಪಸ್ಥಿತರಿದ್ದರು.

ಬೀದರ್ : ರಾಷ್ಟ್ರೀಯ ಪಲ್ಸ್ ಪೋಲಿಯೊ ಜಾಥಾಕ್ಕೆ ಚಾಲನೆ



ಬೀದರ್,ಜೂ.29-

ಪೋಲಿಯೋ ಲಸಿಕೆ ವಾಹನ ಜಾಥಾ ಕಾರ್ಯಕ್ರಮದ ರ‍್ಯಾಲಿಗೆ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅವರಣದಲ್ಲಿ ಶನಿವಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದ ಉಪ ನಿರ್ದೇಶಕಿ ಡಾ. ಇಂದುಮತಿ ಪಾಟೀಲ್ ಅವರು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮವು ಜೂ.28 ರಂದು ಬೂತ್‌ಗಳ ಮೂಲಕ ಲಸಿಕೆ ನೀಡಲಾಗುವುದು. ಜೂ.29 ರಿಂದ ಜು.1ರ ವರೆಗೆ ಮನೆಗಳಿಗೆ ಭೇಟಿ ನೀಡಿ ಉಳಿದ ಮಕ್ಕಳಿಗೆ ಪೋಲಿಯೋ ಲಸಿಕೆ ನೀಡಲಾಗುವುದು. ಆದ್ದರಿಂದ 5 ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಲಸಿಕೆ ನೀಡುವಂತೆ ಅವರು ಹೇಳಿದರು.

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ಡಾ. ಶಿವಶಂಕರ್.ಬಿ ಅವರು ಮಾತನಾಡಿ, 5 ವರ್ಷದೊಳಗಿನ ಒಟ್ಟು 2,13,213 ಗ್ರಾಮೀಣ ಮತ್ತು ನಗರ ಪ್ರದೇಶ ಸೇರಿ ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದ್ದು, ಇದಕ್ಕಾಗಿ 996 ಬೂತ್‌ಗಳು ನಿರ್ಮಿಸಲಾಗಿದೆ. ಅದರಂತೆ 2,154 ಲಸಿಕೆದಾರರನ್ನು ಹಾಗೂ 216 ಜನರನ್ನು ಬೂತ್ ಮೇಲ್ವಿಚಾರಣೆಗಾಗಿ ಸಿಬ್ಬಂದಿಯವರನ್ನು ನೇಮಿಸಲಾಗಿದ್ದು, 11 ಮೋಬೈಲ್ ತಂಡಗಳು ಹಾಗೂ 70 ಟ್ರಾನ್ಸಿಟ್ ಪಾಯಿಂಟ್ಸ್ ಗಳ ಮೂಲಕ ಪ್ರತಿಶತ ಲಸಿಕಾಕರಣ ಗುರಿ ಸಾಧಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಮಲೇರಿಯಾ ನಿಯಂತ್ರಣಾಧಿಕಾರಿ ಡಾ. ರಾಜಶೇಖರ್ ಪಾಟೀಲ್, ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ. ಅನೀಲ್ ಚಿಂತಾಮಣಿ, ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ. ಕಿರಣ್ ಪಾಟೀಲ್, ತಾಲೂಕಾ ಅಧಿಕಾರಿ ಡಾ. ಸಂಗಾರೆಡ್ಡಿ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಸಾವಿತ್ರಿಬಾಯಿ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಚಂದ್ರಶೇಖರ್ ಇಜಾರೆ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಓಂಕಾರ್ ಮಲ್ಲಿಗೆ, ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕ ಉಮೇಶ್ ಬಿರಾದಾರ್, ಡಿಪಿಸಿ ಕಂ ಕ್ಲಸ್ಟರ್ ಪ್ರಿವೆನ್ಸನ್ ಅಧಿಕಾರಿ ಶಿವಶಂಕರ್ ಬೆಮಳಗಿ ಹಾಗೂ ಲಸಿಕಾ ಮೇಲ್ವಿಚಾರಕ ಲೋಕೇಶ್ ಸಲಗರ್ ಸೇರಿದಂತೆ ಆರೋಗ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಉಪಸ್ಥಿತರಿದ್ದರು.



ಕಾಂಗ್ರೆಸ್ ಕಾರ್ಯಕರ್ತರು ಕಮಿಷನ್ ದಂಧೆಯಲ್ಲಿ ತೊಡಗಿದ್ದಾರೆ; ಸಜ್ಜನಶೆಟ್ಟಿ ಆರೋಪ

ಚಿತ್ತಾಪುರ,,ಜೂ.28-


ಪಟ್ಟಣದಲ್ಲಿ ನಡೆಯುತ್ತಿರುವ ಬಹುತೇಕ ಕಾಮಗಾರಿಗಳು ಕಳಪೆಯಿಂದ ಕೂಡಿದ್ದು, ಕಾಂಗ್ರೆಸ್ ಕಾರ್ಯಕರ್ತರು ಕಮಿಷನ್ ದಂಧೆಯಲ್ಲಿ ತೊಡಗಿದ್ದಾರೆ ಎಂದು ಬಿಜೆಪಿ ಮುಖಂಡ ರವೀಂದ್ರ ಸಜ್ಜನ್ ಶೆಟ್ಟ ಆರೋಪಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ರವೀಂದ್ರ ಸಜ್ಜನ್ ಶೆಟ್ಟಿ, ಒಳಚರಂಡಿ ವ್ಯವಸ್ಥೆಗಾಗಿ ಕಳೆದ ವರ್ಷ 30 ಕೋಟಿ ರೂ. ಅನುದಾನ ಬಂದಿದ್ದು, ಅದರಲ್ಲಿ ಬಹುತೇಕ ಕಾಮಗಾರಿಗಳು ಕಳಪೆಯಿಂದ ಕೂಡಿವೆ. ಕೆಲಸ ಮಾಡಿದ ಗುತ್ತಿಗೆದಾರರಿಗೆ ಹಣ ಸಂದಾಯ ಮಾಡಿಲ್ಲವೆಂದು ಆರೋಪಿಸಲಾಗುತ್ತಿದೆ. ಸರಿಯಾಗಿ ಒಳಚರಂಡಿ ವ್ಯವಸ್ಥೆ ನಿರ್ಮಿಸದ ಕಾರಣ ಕೊಳಚೆ ನೀರು ನದಿಗೆ ಸೇರುತ್ತದೆ. ಚಿತ್ತಾಪುರ ಹಿಂದುಳಿದ ತಾಲೂಕು ಎಂಬ ಹಣೆಪಟ್ಟಿಯಿಂದ ಹೊರಗೆ ಬರುವುದು ಯಾವಾಗ? ಪ್ರಿಯಾಂಕ್ ಖರ್ಗೆ ಅವರು ಆರ್‌ಎಸ್ ಎಸ್ ಜಪ ಬಿಟ್ಟು ತಾಲೂಕಿನ ಅಭಿವೃದ್ಧಿಗೆ ಸಂಕಲ್ಪ ಮಾಡಲಿ ಎಂದರು.

ಅಮೃತ ನಗರೋತ್ಥಾನ ಯೋಜನೆ ಅಡಿಯಲ್ಲಿ ಸುಮಾರು 5 ಕೋಟಿ ರೂ. ಅನುದಾನ ಬಿಡುಗಡೆಯಾಗಿದ್ದು, ಕಾಮಗಾರಿಗಳು ಪೂರ್ಣಗೊಂಡಿಲ್ಲ. 2023-24ನೇ ಸಾಲಿನ 15ನೇ ಹಣಕಾಸು ಯೋಜನೆಯಲ್ಲಿ ಎರಡು ಕೋಟಿ ರೂ. ಅನುದಾನ ಮಂಜೂರಾಗಿದ್ದು, ಅಭಿವೃದ್ಧಿ ಕಾಮಗಾರಿಗಳು ನೆನೆಗುದಿಗೆ ಬಿದ್ದಿವೆ. ತಾಲೂಕಿನಾದ್ಯಂತ ಅಭಿವೃದ್ಧಿಯ ಹೆಸರಿನಲ್ಲಿ ಅನುದಾನ ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ ಎಂದು ದೂರಿದರು.

ಈ ವೇಳೆ ಬಿಜೆಪಿ ಮಂಡಲ ಪ್ರಧಾನ ಕಾರ್ಯದರ್ಶಿ ನಾಗರಾಜ ಹೂಗಾರ್, ಮಾಜಿ ವಿರೋಧ ಪಕ್ಷದ ನಾಯಕ ನಾಗರಾಜ್ ಭಂಕಲಗಿ, ನಗರ ಯೋಜನಾ ಪ್ರಾಧಿಕಾರ ಮಾಜಿ ಅಧ್ಯಕ್ಷ ದೀಪಕ್ ಹೊನ್ನಾಸರ್ಕರ್, ನಗರ ಯುವ ಮೋರ್ಚಾ ಅಧ್ಯಕ್ಷ ಸಂಗಮೇಶ ಪಾಟೀಲ್, ಮಲ್ಲಿಕಾರ್ಜುನ ಇಟಗಿ, ವಿಶ್ವನಾಥ್ ಹಾಬಾಳ, ರಮೇಶ್ ಬೊಮ್ಮನಹಳ್ಳಿ, ಶ್ಯಾಮಣ್ಣ ಮೇಧಾ, ಪ್ರಭು ಗಂಗಾಣಿ ಉಪಸ್ಥಿತರಿದ್ದರು.

ಕಲಬುರಗಿ ಮಹಾರಾಷ್ಟ್ರಕ್ಕೆ ಅಕ್ರಮವಾಗಿ ಸಾಗಿಸುತ್ತಿದ್ದ 17,500 ಕೆಜಿ ಅನ್ನಭಾಗ್ಯ ಅಕ್ಕಿ ಜಪ್ತಿ



ಅಫಜಲಪುರ,ಜೂ.28-

ಕಾಳಸಂತೆಯಲ್ಲಿ ಖರೀದಿಸಿ ಮಹಾರಾಷ್ಟ್ರಕ್ಕೆ ಅಕ್ರಮವಾಗಿ ಸಾಗಿಸುತ್ತಿದ್ದ ಸರ್ಕಾರದ ಅನ್ನಭಾಗ್ಯ ಯೋಜನೆಯ 17,500 ಕೆಜಿ ಅಕ್ಕಿಯನ್ನು ಆಹಾರ ಇಲಾಖೆ ಹಾಗೂ ಪೊಲೀಸ್ ಇಲಾಖೆ ಜಂಟಿ ಕಾರ್ಯಾಚರಣೆ ನಡೆಸಿ ಜಪ್ತಿ ಮಾಡಿವೆ. ಪಟ್ಟಣದ ಬಸವೇಶ್ವರ ವೃತ್ತದ ಬಳಿ ಖಚಿತ ಮಾಹಿತಿಯ ಆಧಾರದ ಮೇಲೆ ಅಧಿಕಾರಿಗಳು ವಾಹನವನ್ನು ತಡೆದು ಪರಿಶೀಲನೆ ನಡೆಸಿದ ವೇಳೆ, ತಲಾ 50 ಕೆಜಿ ತೂಕದ 350 ಚೀಲಗಳಲ್ಲಿ ಅನ್ನಭಾಗ್ಯ ಯೋಜನೆಯ ಅಕ್ಕಿ ಪತ್ತೆಯಾಗಿದೆ. ಜಪ್ತಿ ಮಾಡಿದ ಅಕ್ಕಿಯ ಒಟ್ಟು ತೂಕ 17,500 ಕೆಜಿ ಆಗಿದ್ದು, ಅದರ ಅಂದಾಜು ಮೌಲ್ಯ ಸುಮಾರು 5.95 ಲಕ್ಷ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜೇರಟಗಿ, ಮೋರಟಗಿ, ಘತ್ತರಗಿ ಹಾಗೂ ಅಫಜಲಪುರ ಮಾರ್ಗವಾಗಿ ಈ ಅಕ್ಕಿಯನ್ನು ಮಹಾರಾಷ್ಟ್ರಕ್ಕೆ ಅಕ್ರಮವಾಗಿ ಸಾಗಿಸಲಾಗುತ್ತಿತ್ತು. ದಾಳಿಯ ವೇಳೆ ಅಕ್ರಮ ಸಾಗಣೆಗೆ ಬಳಸಲಾಗುತ್ತಿದ್ದ ವಾಹನವನ್ನು ಸಹ ವಶಕ್ಕೆ ಪಡೆಯಲಾಗಿದೆ. ಈ ಸಂಬಂಧ ಅಫಜಲಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಕ್ಕಳ ಆರೋಗ್ಯ ರಕ್ಷಣೆಗೆ ಪೋಲಿಯೋ ಹನಿ ಅತ್ಯಗತ್ಯ: ಶಾಸಕ ಬಿ.ಎಂ. ನಾಗರಾಜ್

ಸಿರುಗುಪ್ಪ, ಜೂ. 29:


ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನಕ್ಕೆ ಸಿರುಗುಪ್ಪ ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಶಾಸಕ ಬಿ.ಎಂ. ನಾಗರಾಜ್ ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಮೂಲಕ ಚಾಲನೆ ನೀಡಿದರು.



ಕಾರ್ಯಕ್ರಮದಲ್ಲಿ ಸಾರ್ವಜನಿಕ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ. ವಿವೇಕಾನಂದ, ಜಿಲ್ಲಾ ಉಪ ಆರೋಗ್ಯ ಶಿಕ್ಷಣಾಧಿಕಾರಿ ಶ್ರೀಮತಿ ರೇಣುಕಾ, ಕಾರ್ಯಕ್ರಮ ವ್ಯವಸ್ಥಾಪಕ ಪ್ರಹ್ಲಾದ್, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಭೀಮರಾಯ ರೆಡ್ಡಿ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಮಹಮ್ಮದ್ ಖಾಸಿಂ, ಆಪ್ತ ಸಮಾಲೋಚಕ ಮಲ್ಲೇಶಪ್ಪ, ಕೌನ್ಸಿಲರ್ ವೆಂಕಟೇಶ್, ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿಗಳು, ಶುಶ್ರೂಷಣಾಧಿಕಾರಿಗಳು, ಟಿಬಿ ಮೇಲ್ವಿಚಾರಕರು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಬೆಂಗಳೂರಿಗೆ ಇನ್ನೊಂದು ಫ್ಲೈಓವರ್ ಬೇಡ; ಸಮಗ್ರ ಪುನರ್‌ಅಭಿವೃದ್ಧಿ ಬೇಕು

ವಲಸಿಗರು ನಗರದ ಸಮಸ್ಯೆಯಲ್ಲ; ನಗರದ ಶಕ್ತಿಯಾಗಿದ್ದಾರೆ. ಜನನ ಪ್ರಮಾಣ ಕುಸಿಯುತ್ತಿರುವ ಸಂದರ್ಭದಲ್ಲಿ ಅವರೇ ಯುವ ಕಾರ್ಮಿಕ ಬಲವನ್ನು ಉಳಿಸುತ್ತಿದ್ದಾರೆ. ಆದ್ದರಿಂದ ವಲಸೆಯನ್ನು ತಡೆಯುವುದು ಪರಿಹಾರವಲ್ಲ; ಅದನ್ನು ಯೋಜಿತವಾಗಿ ನಿರ್ವಹಿಸುವುದೇ ಪರಿಹಾರ.

ಬೆಂಗಳೂರು ಇಂದು ದೇಶದ ಆರ್ಥಿಕ ಬೆಳವಣಿಗೆಯ ಎಂಜಿನ್. ಐಟಿ, ಶಿಕ್ಷಣ, ಸಂಶೋಧನೆ, ಉದ್ಯಮ ಹಾಗೂ ಉದ್ಯೋಗದಲ್ಲಿ ದೇಶಕ್ಕೆ ಹೆಮ್ಮೆ ತಂದಿರುವ ಈ ನಗರ ಇಂದು ಟ್ರಾಫಿಕ್, ಪ್ರವಾಹ, ಕೆರೆಗಳ ನಾಶ, ರಾಜಕಾಲುವೆಗಳ ಒತ್ತುವರಿ, ಕೊಳಚೆ ಪ್ರದೇಶಗಳ ವಿಸ್ತರಣೆ, ಹಸಿರು ಪ್ರದೇಶಗಳ ಕ್ಷೀಣತೆ ಹಾಗೂ ಮೂಲಸೌಕರ್ಯಗಳ ಮೇಲಿನ ಅತಿಯಾದ ಒತ್ತಡದಿಂದ ಬಳಲುತ್ತಿದೆ. ಪ್ರತಿಯೊಂದು ಸಮಸ್ಯೆಗೂ ಪ್ರತ್ಯೇಕ ಯೋಜನೆಗಳನ್ನು ರೂಪಿಸುತ್ತಲೇ ಇದ್ದೇವೆ. ರಸ್ತೆ ಅಗಲ ಮಾಡುವುದು, ಫ್ಲೈಓವರ್ ಕಟ್ಟುವುದು, ಅಂಡರ್‌ಪಾಸ್ ನಿರ್ಮಿಸುವುದು, ಮೆಟ್ರೋ ವಿಸ್ತರಿಸುವುದು – ಇವೆಲ್ಲ ಅಗತ್ಯವೇ. ಆದರೆ, ಇವು ಶಾಶ್ವತ ಪರಿಹಾರವಲ್ಲ. ಬೆಂಗಳೂರಿಗೆ ಈಗ ಬೇಕಾಗಿರುವುದು ಸಮಗ್ರ ನಗರ ಮತ್ತು ಪ್ರಾದೇಶಿಕ ಪುನರ್‌ಅಭಿವೃದ್ಧಿ.

ಈ ಪುನರ್‌ಅಭಿವೃದ್ಧಿಯ ಮೊದಲ ಹೆಜ್ಜೆ ನಗರದ ಕೊಳಚೆ ಪ್ರದೇಶಗಳಿಂದಲೇ ಆರಂಭವಾಗಬೇಕು. ಸಾಧ್ಯವಾದಷ್ಟು ಅಲ್ಲಿಯೇ ಬಹುಮಹಡಿ ವಸತಿಗಳನ್ನು ನಿರ್ಮಿಸಿ ನಿವಾಸಿಗಳನ್ನು ಪುನರ್ವಸತಿ ಮಾಡಬೇಕು. ಉದಾಹರಣೆಗೆ, ಒಂದು ಎಕರೆ ವ್ಯಾಪ್ತಿಯಲ್ಲಿರುವ ಕೊಳಚೆ ಪ್ರದೇಶದಲ್ಲಿ ಸುಮಾರು 30% ಭೂಮಿಯನ್ನು ಬಹುಮಹಡಿ ವಸತಿ ಕಟ್ಟಡಗಳಿಗೆ ಬಳಸಿದರೆ, ಉಳಿದ ಸುಮಾರು 70% ಭೂಮಿಯನ್ನು ರಸ್ತೆ, ಉದ್ಯಾನ, ಶಾಲೆ, ಆಸ್ಪತ್ರೆ, ಪಾರ್ಕಿಂಗ್ ಹಾಗೂ ಇತರ ಸಾರ್ವಜನಿಕ ಸೌಲಭ್ಯಗಳಿಗೆ ಮತ್ತು ಯೋಜಿತ ವಾಣಿಜ್ಯ ಅಭಿವೃದ್ಧಿಗೆ ಬಳಸಬಹುದು. ನಗರದ ಹೃದಯಭಾಗದಲ್ಲಿರುವ ಇಂತಹ ಪ್ರದೇಶಗಳ ಭೂಮಿಯ ಮೌಲ್ಯ ಅತ್ಯಂತ ಹೆಚ್ಚಿರುವುದರಿಂದ, ವಾಣಿಜ್ಯ ಅಭಿವೃದ್ಧಿಯಿಂದ ಬರುವ ಆದಾಯವೇ ಪುನರ್ವಸತಿ ಮತ್ತು ಮೂಲಸೌಕರ್ಯ ನಿರ್ಮಾಣದ ವೆಚ್ಚದ ಬಹುಪಾಲನ್ನು ಭರಿಸುವ ಸಾಮರ್ಥ್ಯ ಹೊಂದಿರುತ್ತದೆ. ಹೀಗಾಗಿ ಭೂಮಿಯ ಮೌಲ್ಯವನ್ನೇ ಅಭಿವೃದ್ಧಿಯ ಬಂಡವಾಳವನ್ನಾಗಿ ಪರಿವರ್ತಿಸುವ ಈ ಸ್ವಾವಲಂಬಿ ಹಣಕಾಸಿನ ಮಾದರಿ ಸರ್ಕಾರದ ಮೇಲಿನ ಹಣಕಾಸಿನ ಹೊರೆ ಕಡಿಮೆ ಮಾಡುವುದರ ಜೊತೆಗೆ ಯೋಜನೆಯ ಅನುಷ್ಠಾನಕ್ಕೂ ವೇಗ ನೀಡುತ್ತದೆ.

ಈ ಪ್ರಕ್ರಿಯೆಯನ್ನು ಹಂತ ಹಂತವಾಗಿ ಜಾರಿಗೊಳಿಸಬೇಕು. ಮೊದಲಿಗೆ ನಗರದ ಕೋರ್ ಪ್ರದೇಶಗಳಲ್ಲಿರುವ ಕೊಳಚೆ ಪ್ರದೇಶಗಳನ್ನು, ನಂತರ ಮಧ್ಯಂತರ ಪ್ರದೇಶಗಳಲ್ಲಿರುವ ಕೊಳಚೆ ಪ್ರದೇಶಗಳನ್ನು ಹಾಗೂ ಕೊನೆಗೆ ಹೊರವಲಯದ ಕೊಳಚೆ ಪ್ರದೇಶಗಳನ್ನು ಪುನರ್‌ಅಭಿವೃದ್ಧಿಪಡಿಸಬೇಕು. ಈ ಹಂತ ಪೂರ್ಣಗೊಂಡ ಬಳಿಕ ಹಳೆಯದಾಗಿ ಶಿಥಿಲಗೊಂಡು ನಗರ ಸೌಂದರ್ಯ ಮತ್ತು ಕಾರ್ಯಕ್ಷಮತೆಯನ್ನು ಕಳೆದುಕೊಂಡಿರುವ ಬ್ಲೈಟ್ (ಸ್ಲಂಗಳಲ್ಲದಿದ್ದರೂ, ರಾಜಕಾಲುವೆಗಳು, ದೊಡ್ಡ ಚರಂಡಿಗಳು, ಕೊಳಚೆ ಪ್ರದೇಶ, ಕಸ ಸಂಗ್ರಹಾರ.. ಇತ್ಯಾದಿಗಳ ಪಕ್ಕದಲ್ಲಿ ಗಾಳಿ, ಬೆಳಕು, ರಸ್ತೆ, ಒಳಚರಂಡಿ ಸೇರಿದಂತೆ ಮೂಲಸೌಕರ್ಯಗಳ ಕೊರತೆಯಿಂದ ವಾಸಯೋಗ್ಯತೆಯನ್ನು ಕಳೆದುಕೊಂಡಿರುವ ಮತ್ತು ಎ ಖಾತ, ಬಿ ಖಾತಗಳನ್ನೂ ಸಹ ಹೆಚ್ಚು ಹೊಂದಿರುವ ಪಕ್ಕಾ ಕಟ್ಟಡಗಳ ಪ್ರದೇಶಗಳು) ಪ್ರದೇಶಗಳ ಪುನರ್‌ಅಭಿವೃದ್ಧಿಯನ್ನು ಇದೇ ಮಾದರಿಯಲ್ಲಿ ಕೈಗೊಳ್ಳಬೇಕು. ಇದರಿಂದ ನಗರವು ಯೋಜಿತವಾಗಿ ಪುನರುಜ್ಜೀವನಗೊಂಡು, ವಸತಿ, ಮೂಲಸೌಕರ್ಯ ಮತ್ತು ಸಾರ್ವಜನಿಕ ಸ್ಥಳಗಳ ಗುಣಮಟ್ಟವೂ ಗಣನೀಯವಾಗಿ ಸುಧಾರಿಸುತ್ತದೆ.

ಬೆಂಗಳೂರು ಪ್ರವಾಹದಿಂದ ಮುಕ್ತವಾಗಬೇಕಾದರೆ ಕೆರೆಗಳು, ರಾಜಕಾಲುವೆಗಳು ಮತ್ತು ಜೌಗು ಪ್ರದೇಶಗಳನ್ನು ಉಳಿಸುವುದೇ ಮೊದಲ ಷರತ್ತು. ರಾಜಕಾಲುವೆಗಳ ಒತ್ತುವರಿ ತೆರವುಗೊಳಿಸಿದ ನಂತರ ಅವುಗಳನ್ನು ಕಾಂಕ್ರೀಟ್ ಹೊಳೆಗಳನ್ನಾಗಿ ಮಾಡಬಾರದು. ಅವುಗಳನ್ನು ನೈಸರ್ಗಿಕ ಹಳ್ಳಗಳಂತೆ ಪುನಃಸ್ಥಾಪಿಸಿ, ಮಳೆನೀರು ಯಾವುದೇ ಅಡೆತಡೆಯಿಲ್ಲದೆ ಹರಿಯುವ ವ್ಯವಸ್ಥೆ ಮಾಡಬೇಕು. ಸ್ಮಾರ್ಟ್ ಸಿಟಿ ಎಂದರೆ ಅಲಂಕಾರಿಕ ಫುಟ್‌ಪಾತ್, ಟೈಲ್ಸ್ ಅಥವಾ ಬಣ್ಣದ ದೀಪಗಳಲ್ಲ; ಮಳೆನೀರಿನ ಹಳ್ಳಗಳಿಗೆ ಎಲ್ಲಿಯೂ ಕೊಳಚೆ ನೀರು ಸೇರದ ನಗರವೇ ನಿಜವಾದ ಸ್ಮಾರ್ಟ್ ಸಿಟಿ. ರಾಜಕಾಲುವೆಗಳ ಎರಡೂ ಬದಿಗಳಲ್ಲಿ ಉಷ್ಣವಲಯದ ವಿವಿಧ ದೇಶಗಳ ಮರಗಳು ಮತ್ತು ಸಸ್ಯಗಳನ್ನು ಬೆಳೆಸಿದರೆ ಬೆಂಗಳೂರು ವಿಶ್ವದ ಅಪರೂಪದ ಹಸಿರು ನಗರವಾಗಬಹುದು. ಜುಳುಜುಳು ಹರಿಯುವ ನೀರಿನ ನಾದ ಮತ್ತು ಹಸಿರಿನ ತಂಪು ಬೆಂಗಳೂರಿನ ಹವಾಮಾನಕ್ಕೆ ಹೊಸ ಮೆರಗು ನೀಡುತ್ತದೆ.

ಅಭಿವೃದ್ಧಿಯ ಹೆಸರಿನಲ್ಲಿ ಯಾರೂ ಬಲಿಪಶುಗಳಾಗಬಾರದು. ಭೂಮಿ, ಮನೆ ಅಥವಾ ಜೀವನೋಪಾಯ ಕಳೆದುಕೊಳ್ಳುವವರಿಗೆ ನ್ಯಾಯಯುತ ಪರಿಹಾರ, ಘನತೆಯುತ ಪುನರ್ವಸತಿ ಮತ್ತು ನಿಗದಿತ ಅವಧಿಯಲ್ಲಿ ನ್ಯಾಯ ದೊರೆಯಬೇಕು.

ಸಿಂಗಾಪುರ ನಿರ್ಮಾತೃ ಲೀ ಕ್ವಾನ್ ಯೂ ತಮ್ಮ ದೇಶದ ಪುನರ್‌ನಿರ್ಮಾಣದ ಸಂದರ್ಭದಲ್ಲಿ ಸಾರ್ವಜನಿಕ ಹಿತಾಸಕ್ತಿಗಾಗಿ ಭೂಮಿಯನ್ನು ದೂರದೃಷ್ಟಿಯಿಂದ ಬಳಸಿದರು. ಜೊತೆಗೆ ಪ್ರತಿಯೊಂದು ಕುಟುಂಬಕ್ಕೂ ಕೈಗೆಟಕುವ ದರದಲ್ಲಿ ಸ್ವಂತ ಮನೆ ದೊರೆಯುವಂತೆ ಯೋಜಿಸಿದರು. ಇಂದು ಸಿಂಗಾಪುರದಲ್ಲಿ ಬಹುಪಾಲು ಜನರು ಸರ್ಕಾರ ನಿರ್ಮಿಸಿದ ಗುಣಮಟ್ಟದ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಮನೆ ಎಂಬುದು ಕೇವಲ ಕಟ್ಟಡವಲ್ಲ; ಅದು ನಾಗರಿಕನಿಗೆ ದೇಶದಲ್ಲಿ ತನ್ನದೇ ಆದ ಪಾಲಿದೆ ಎಂಬ ಭಾವನೆ ಮೂಡಿಸುತ್ತದೆ. ಬೆಂಗಳೂರಿನ ಪುನರ್‌ಅಭಿವೃದ್ಧಿಯಲ್ಲಿಯೂ ಕೈಗೆಟಕುವ ವಸತಿಗೆ ಮೊದಲ ಆದ್ಯತೆ ಸಿಗಬೇಕು.

ಬೆಂಗಳೂರು ಸುತ್ತಮುತ್ತ ಬಿಡದಿ ಮಾತ್ರವಲ್ಲ, ಇನ್ನೂ ಹಲವು ಯೋಜಿತ ಕೌಂಟರ್-ಮ್ಯಾಗ್ನೆಟ್ ಪಟ್ಟಣಗಳನ್ನು ಅಭಿವೃದ್ಧಿಪಡಿಸಬೇಕು. ಕೈಗಾರಿಕೆ, ಶಿಕ್ಷಣ, ಆರೋಗ್ಯ, ಉದ್ಯೋಗ ಮತ್ತು ಉತ್ತಮ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಈ ಪಟ್ಟಣಗಳ ಬೆನ್ನೆಲುಬಾಗಬೇಕು. ಪುನರ್‌ಅಭಿವೃದ್ಧಿಯಿಂದ ಸ್ಥಳಾಂತರಗೊಳ್ಳುವ ಕುಟುಂಬಗಳಿಗೆ ಗೌರವಯುತ ಪುನರ್ವಸತಿ ಕಲ್ಪಿಸಲು ಇವು ನೆರವಾಗುತ್ತವೆ. ಹೊಸ ಪಟ್ಟಣಗಳಿಗೆ ಭೂಮಿ ಆಯ್ಕೆ ಮಾಡುವಾಗ ಫಲವತ್ತಾದ ಗದ್ದೆಗಳು, ತೋಟಗಳು ಮತ್ತು ಕೃಷಿಭೂಮಿಗಿಂತ ಬಂಜರು ಅಥವಾ ಕಡಿಮೆ ಕೃಷಿ ಸಾಮರ್ಥ್ಯವಿರುವ ಎತ್ತರದ ಪ್ರದೇಶಗಳಿಗೆ ಆದ್ಯತೆ ನೀಡಬೇಕು. ಇದರಿಂದ ಮಳೆನೀರು ಸುಲಭವಾಗಿ ಹರಿದು ಹೋಗುತ್ತದೆ; ಫಲವತ್ತಾದ ಕೃಷಿಭೂಮಿ ಮತ್ತು ರೈತರ ಜೀವನೋಪಾಯವೂ ಉಳಿಯುತ್ತದೆ.

ವಲಸಿಗರು ನಗರದ ಸಮಸ್ಯೆಯಲ್ಲ; ನಗರದ ಶಕ್ತಿಯಾಗಿದ್ದಾರೆ. ಜನನ ಪ್ರಮಾಣ ಕುಸಿಯುತ್ತಿರುವ ಸಂದರ್ಭದಲ್ಲಿ ಅವರೇ ಯುವ ಕಾರ್ಮಿಕ ಬಲವನ್ನು ಉಳಿಸುತ್ತಿದ್ದಾರೆ. ಆದ್ದರಿಂದ ವಲಸೆಯನ್ನು ತಡೆಯುವುದು ಪರಿಹಾರವಲ್ಲ; ಅದನ್ನು ಯೋಜಿತವಾಗಿ ನಿರ್ವಹಿಸುವುದೇ ಪರಿಹಾರ.

ಪ್ರತಿಯೊಂದು ಜಲಾಶಯಕ್ಕೂ ನೀರು ಸಂಗ್ರಹಿಸಿಕೊಳ್ಳುವ ಮಿತಿ ಇರುತ್ತದೆ. ಆ ಮಿತಿ ದಾಟಿದಾಗ ಹೆಚ್ಚುವರಿ ನೀರು ಹೊರಹರಿಯುತ್ತದೆ. ಬೆಂಗಳೂರಿನ ಬೆಳವಣಿಗೆಯೂ ಇದೇ ತತ್ವದ ಮೇಲೆ ಸಾಗಬೇಕು. ನಗರ ತನ್ನ ಯೋಜಿತ ಜನಸಂಖ್ಯೆಯ ಮಿತಿಯನ್ನು ತಲುಪಿದ ನಂತರ ಹೆಚ್ಚುವರಿ ಬೆಳವಣಿಗೆಯನ್ನು ಕೌಂಟರ್-ಮ್ಯಾಗ್ನೆಟ್ ಪಟ್ಟಣಗಳು ಹೀರಿಕೊಳ್ಳಬೇಕು. ಹೇಗೆ ಜಲಾಶಯಕ್ಕೆ ಜಲಾನಯನ ಪ್ರದೇಶವಿದೆಯೋ, ಹಾಗೆಯೇ ಬೆಂಗಳೂರಿಗೂ ವಿಶಾಲ ಪ್ರಾದೇಶಿಕ ವ್ಯಾಪ್ತಿ ಇದೆ. ಆದ್ದರಿಂದ ನಗರದ ಯೋಜನೆ ಬಿಬಿಎಂಪಿ ಗಡಿಗೆ ಸೀಮಿತವಾಗದೆ ಇಡೀ ಬೆಂಗಳೂರು ಮಹಾನಗರ ಪ್ರದೇಶವನ್ನು ಒಳಗೊಂಡಿರಬೇಕು.

ಇಂತಹ ಯೋಜನೆಗಳು ಒಂದೇ ಸರ್ಕಾರದ ಅವಧಿಯಲ್ಲಿ ಪೂರ್ಣಗೊಳ್ಳುವುದಿಲ್ಲ. ಆದ್ದರಿಂದ ವಿಶೇಷ ಕಾನೂನಿನಡಿ ಸ್ವಾಯತ್ತ ಶಾಸನಬದ್ಧ ಪ್ರಾಧಿಕಾರವನ್ನು ಸ್ಥಾಪಿಸಿ, ಅದರ ಅಧೀನದಲ್ಲಿ ವಿವಿಧ ಪುನರ್‌ಅಭಿವೃದ್ಧಿ ಯೋಜನೆಗಳಿಗೆ ಮತ್ತು ಹೊಸ ಪಟ್ಟಣಗಳ ನಿರ್ಮಾಣಕ್ಕೆ ವಿಶೇಷ ಉದ್ದೇಶಿತ ಸಂಸ್ಥೆಗಳನ್ನು () ರಚಿಸಬೇಕು. ಸರ್ಕಾರ, ಹಣಕಾಸು ಸಂಸ್ಥೆಗಳು ಹಾಗೂ ಭೂಮಿ ನೀಡುವ ರೈತರು ಬಯಸಿದರೆ ಈ ಗಳಲ್ಲಿ ಪಾಲುದಾರರಾಗುವ ಅವಕಾಶ ಕಲ್ಪಿಸಬೇಕು. ಭೂಮಿಗೆ ಕೇವಲ ಪರಿಹಾರ ನೀಡಿ ಸಂಬಂಧ ಮುಗಿಸುವ ಬದಲು, ಅಭಿವೃದ್ಧಿಯಿಂದ ಬರುವ ಆದಾಯದಲ್ಲಿ ಅವರಿಗೆ ಲಾಭಾಂಶ ನೀಡುವ ವ್ಯವಸ್ಥೆ ರೂಪಿಸಿದರೆ ರೈತರು ಅಭಿವೃದ್ಧಿಯ ಪಾಲುದಾರರಾಗುತ್ತಾರೆ. ಇದರಿಂದ ಭೂಸ್ವಾಧೀನದ ವಿರೋಧ ಕಡಿಮೆಯಾಗುತ್ತದೆ, ಸರ್ಕಾರದ ಮೇಲಿನ ಹಣಕಾಸಿನ ಒತ್ತಡವೂ ತಗ್ಗುತ್ತದೆ ಮತ್ತು ಅಭಿವೃದ್ಧಿಗೆ ಸುಸ್ಥಿರ ಹಣಕಾಸಿನ ಮಾದರಿಯೂ ರೂಪುಗೊಳ್ಳುತ್ತದೆ.

ಬೆಂಗಳೂರು ಭವಿಷ್ಯವನ್ನು ಉಳಿಸಬೇಕಾದರೆ ಇನ್ನಷ್ಟು ಫ್ಲೈಓವರ್‌ಗಳಲ್ಲ, ಸಮಗ್ರ ಪುನರ್‌ಅಭಿವೃದ್ಧಿ ಬೇಕು. ಇಂದು ಬೆಂಗಳೂರು ಎದುರಿಸುತ್ತಿರುವ ಸಮಸ್ಯೆಗಳನ್ನು ನಾಳೆ ಭಾರತದ ಇತರ ಮಹಾನಗರಗಳೂ ಎದುರಿಸಲಿವೆ. ಆದ್ದರಿಂದ ಬೆಂಗಳೂರಿಗಾಗಿ ರೂಪಿಸುವ ಸಮಗ್ರ ಪುನರ್‌ಅಭಿವೃದ್ಧಿ ಮಾದರಿ ದೇಶದ ಇತರ ನಗರಗಳಿಗೂ ಮಾರ್ಗದರ್ಶಿಯಾಗಬಹುದು. ನಗರಗಳನ್ನು ಕಟ್ಟುವುದು ಸುಲಭ; ಆದರೆ ಮುಂದಿನ ನೂರು ವರ್ಷಗಳಿಗೂ ಬದುಕುವ ನಗರವನ್ನು ಕಟ್ಟಲು ದೂರದೃಷ್ಟಿ ಬೇಕು. ಆ ದೂರದೃಷ್ಟಿಯನ್ನು ತೋರಿಸುವ ಅವಕಾಶ ಇಂದು ಬೆಂಗಳೂರಿನ ಮುಂದಿದೆ.

ಮಳೆ-ಬೆಳೆಯ ಭವಿಷ್ಯ ಹೇಳುವ ಕಾರಹುಣ್ಣಿಮೆ: ಬೇಸಾಯ ಬದುಕಿನ ಅಪರೂಪದ ಹಬ್ಬ



ರೈತರ ಹೆಗಲಿಗೆ ತಮ್ಮ ಹೆಗಲು ಕೊಟ್ಟು ರೈತನ ಜೀವನಕ್ಕಾಗಿ ತಮ್ಮ ಜೀವ ತೇಯುವ ಮೂಕ ಪ್ರಾಣಿಗಳಾದ ಎತ್ತುಗಳು ದೇವರು ಇದ್ದ ಹಾಗೆ. ಹಾಗಾಗಿ ಕಾರಹುಣ್ಣಿಮೆಯ ದಿನದಂದು ಅವುಗಳನ್ನು ಸಿಂಗರಿಸಿ, ಪೂಜೆ ಮಾಡಿ ಸಂಭ್ರಮಿಸುವ ಒಂದು ರೀತಿಯ ಜನಪದ ಸೊಗಡಿನ ಹಬ್ಬವೇ ಕಾರಹುಣ್ಣಿಮೆ ಎಂದರೂ ತಪ್ಪಾಗಲಾರದು.

ಉತ್ತರ ಕರ್ನಾಟಕದ ಗ್ರಾಮೀಣ ಬದುಕಿನಲ್ಲಿ ಕಾರಹುಣ್ಣಿಮೆಗೆ ವಿಶಿಷ್ಟ ಮಹತ್ವವಿದೆ. ಮುಂಗಾರು ಮಳೆ ಸುರಿದು ಕೃಷಿ ಚಟುವಟಿಕೆಗಳು ಆರಂಭವಾಗಿ ಬಿತ್ತನೆ ಕಾರ್ಯ ಮುಗಿದ ಬಳಿಕ ಆಚರಿಸಲಾಗುವ ಈ ಹಬ್ಬವನ್ನು ರೈತರು ಮಳೆ-ಬೆಳೆಯ ಮುನ್ಸೂಚನೆ ನೀಡುವ ಹಬ್ಬವೆಂದು ನಂಬುತ್ತಾರೆ. ವರ್ಷವಿಡೀ ತಮ್ಮೊಂದಿಗೆ ಹೊಲದಲ್ಲಿ ದುಡಿಯುವ ಎತ್ತುಗಳಿಗೆ ಗೌರವ ಸಲ್ಲಿಸುವ ದಿನವಾಗಿಯೂ ಕಾರಹುಣ್ಣಿಮೆ ವಿಶೇಷ ಸ್ಥಾನ ಪಡೆದಿದೆ.

ಹಬ್ಬಕ್ಕೆ ಕೆಲ ದಿನಗಳ ಮುಂಚೆಯೇ ರೈತರು ಬಣ್ಣದ ಗುಲಾಲ್, ರಿಬ್ಬನ್, ಬಲೂನು ಸೇರಿದಂತೆ ಅಲಂಕಾರಿಕ ಸಾಮಗ್ರಿಗಳನ್ನು ಖರೀದಿಸುತ್ತಾರೆ. ಹಬ್ಬದ ದಿನ ಹೋರಿಗಳು ಹಾಗೂ ಜಾನುವಾರುಗಳನ್ನು ಕೆರೆ ಅಥವಾ ಕಟ್ಟೆಗಳ ಬಳಿ ಕರೆದುಕೊಂಡು ಹೋಗಿ ಸ್ನಾನ ಮಾಡಿಸಿ, ಕೊಂಬುಗಳನ್ನು ಸವರಿ ಬಣ್ಣ ಬಳಿದು, ರಿಬ್ಬನ್, ಗೆಜ್ಜೆ ಹಾಗೂ ಬಲೂನುಗಳಿಂದ ಅಲಂಕರಿಸುತ್ತಾರೆ. ಜಾನುವಾರುಗಳ ಮೈಮೇಲೆ ಬಣ್ಣದ ಚಿತ್ತಾರಗಳನ್ನು ಬಿಡಿಸಿ ಸಿಂಗರಿಸುವ ದೃಶ್ಯ ಗ್ರಾಮೀಣ ಸಂಸ್ಕೃತಿಯ ಸೊಬಗನ್ನು ಹೆಚ್ಚಿಸುತ್ತದೆ.

ಕಾರ ಹುಣಿಮೆಯ ದಿನ ಹೋಳಿಗೆ, ಕಡುಬು ಸೇರಿದಂತೆ ವಿವಿಧ ಸಾಂಪ್ರದಾಯಿಕ ತಿನಿಸುಗಳನ್ನು ಸಿದ್ಧಪಡಿಸುತ್ತಾರೆ. ಮೊದಲು ದೇವರಿಗೆ ನೈವೇದ್ಯ ಅರ್ಪಿಸಿ, ಬಳಿಕ ಜಾನುವಾರುಗಳಿಗೆ ಮೇವು ಮತ್ತು ತಿನಿಸುತ್ತಾರೆ. ನಂತರ ತಾವು ಊಟ ಮಾಡುವ ಸಂಪ್ರದಾಯ ಇಂದಿಗೂ ಮುಂದುವರಿದಿದೆ.

ಜತೆ ರೈತ ಬಸಪ್ಪ ಪೂಜೇರ ಮಾತನಾಡಿ, ''ಕಾರಹುಣ್ಣಿಮೆ ಅಂದ್ರೆ ನಮಗದು ಬರೀ ಹಬ್ಬ ಅಲ್ಲರಿ. ನಮ್ಮ ಜೀವನದ ಒಂದು ಭಾಗ. ವರ್ಷ ಪೂರ್ತಿ ನಮ್ಮ ಜತೆಗೆ ಹೊಲದಲ್ಲಿ ಬೆವರು ಸುರಿಸೋ ಎತ್ತುಗಳಿಗೆ ಆ ದಿನ ಗೌರವ ಕೊಡ್ತೀವಿ. ಅವುಗಳನ್ನು ಮಕ್ಕಳಂತೆ ಸಿಂಗಾರ ಮಾಡಿ, ಒಳ್ಳೆಯ ಊಟ ಹಾಕಿ ಖುಷಿ ಪಡ್ತೀವಿ. ಕರಿ ಹರಿಲೆ ಯಾವ ಎತ್ತು ಮೊದಲು ಹರೀತೋ, ಅದರ ಮೇಲೆ ಈ ವರ್ಷದ ಮಳೆ-ಬೆಳೆ ಹೇಗಿರುತ್ತೆ ಅಂತ ನಾವು ನಂಬ್ಕೊಂಡು ಬಂದಿದ್ದೀವಿ. ಇದು ನಮ್ಮ ಹಿರಿಯರು ಮಾಡಿಕೊಂಡು ಬಂದ ಪದ್ಧತಿ. ಹಬ್ಬದಿಂದ ಊರಿನ ಜನರೆಲ್ಲ ಒಟ್ಟಾಗ್ತಾರೆ, ರೈತರಿಗೆ ಹೊಸ ಉತ್ಸಾಹ ಬರುತ್ತೆ. ಎಷ್ಟು ಕಾಲ ಬದಲಾದ್ರೂ ಕಾರಹುಣ್ಣಿಮೆ ಆಚರಣೆ ಮಾತ್ರ ಕಡಿಮೆ ಆಗಬಾರದು. ನಮ್ಮ ಮುಂದಿನ ಪೀಳಿಗೆಯೂ ಈ ಸಂಪ್ರದಾಯ ಉಳಿಸಿಕೊಳ್ಳಬೇಕು'' ಎಂದರು.

ಕರಿ ಹರಿಯುವ ಕಾರ್ಯಕ್ರಮ

ಕಾರ ಹಬ್ಬದ ವಿಶೇಷತೆಯಲ್ಲಿ ಕರಿ ಹರಿಯುವ(ಎತ್ತುಗಳನ್ನು ಪೂಜಿಸಿ ಓಡಲು ಬಿಡುವುದು) ಕಾರ್ಯಕ್ರಮವೇ ಒಂದು ವೈಶಿಷ್ಟ್ಯ. ಊರ ಮುಂಭಾಗದಲ್ಲಿ ಬೇವಿನ ತೋರಣದ ನಡುವೆ ಕೊಬ್ಬರಿಯನ್ನು ಕಟ್ಟಲಾಗಿರುತ್ತದೆ. ಈ ಕರಿಯನ್ನು ಹರಿಯಲು ಬಿಳಿ ಹಾಗೂ ಕಂದು ಬಣ್ಣದ ಎತ್ತುಗಳಿಗೆ ಮಾತ್ರ ಅವಕಾಶವಿದ್ದು, ಜೋರಾಗಿ ಭಾಜ ಭಜಂತ್ರಿ ಡೋಲು ಮತ್ತು ತಮಟೆಯ ಸದ್ದಾಗುತ್ತಿದ್ದಂತೆಯೇ, ಸಿಂಗರಿಸಿದ್ದ ತಮ್ಮ ರಾಸುಗಳೊಂದಿಗೆ ರೈತರು ತಾಮುಂದು ನಾಮುಂದು ಎಂದು ಆ ಕರಿಯನ್ನು ಹರಿಯುವತ್ತ ದೌಢಾಯಿಸುತ್ತಾರೆ. ಕರಿ ಹರಿಯುವ ಓಟದಲ್ಲಿ ಎತ್ತುಗಳನ್ನು ಹಿಡಿದ ರೈತರು ಎದ್ದೆನೋ ಬಿದ್ದೇನೋ ಎಂದು ಓಡುತ್ತಿದ್ದರೆ, ಅದನ್ನು ನೋಡಲು ಬಂದಿರುವ ಪಡ್ಡೆ ಹುಡುಗರು ಮತ್ತು ಉಳಿದ ರೈತರುಗಳು ಸಿಳ್ಳೆ ಹೊಡೆಯುತ್ತ, ಜೋರಾಗಿ ಕೇಕೆ ಹಾಕುತ್ತ ಉತ್ಸಾಹ ತುಂಬುತ್ತಾರೆ. ಯಾವ ಬಣ್ಣದ ಎತ್ತು ಮೊದಲು ಕರಿಹರಿಯುತ್ತೋ ಆ ಬಣ್ಣದ ಬೆಳೆ ಆ ಬಾರಿ ಚೆನ್ನಾಗಿ ಬರುತ್ತದೆ ಎನ್ನುವ ನಂಬಿಕೆ ಆ ಎಲ್ಲ ರೈತರದ್ದಾಗಿದೆ.

ಬಿಳಿ ಎತ್ತು ಮೊದಲು ಕರಿ ಹರಿದರೆ ಬಿಳಿಜೋಳ, ಅಂದರೆ ಹಿಂಗಾರು ಮಳೆ-ಬೆಳೆ ಚೆನ್ನಾಗಿ ಆಗುತ್ತದೆ ಎನ್ನುವ ನಂಬಿಕೆ ಇದ್ದು, ಇನ್ನು ಕಂದು ಬಣ್ಣದ ಎತ್ತು ಕರಿ ಹರಿದರೆ ಮುಂಗಾರು ಮಳೆಯ ಬೆಳೆಗಳು ಚೆನ್ನಾಗಿ ಆಗುತ್ತೆ ಎನ್ನುವ ನಂಬಿಕೆಯು ಅಲ್ಲಿನ ರೈತರದ್ದಾಗಿದೆ.

ಕರಿ ಹರಿದ ಎತ್ತಿಗೆ ವಿಶೇಷ ಮೆರವಣಿಗೆ ನಡೆಸಿ, ಅದರ ಮಾಲೀಕರನ್ನು ಸನ್ಮಾನಿಸುವ ಸಂಪ್ರದಾಯವೂ ಕೆಲವು ಗ್ರಾಮಗಳಲ್ಲಿ ಇದೆ. ಕರಿ ಹರಿಯಲು ಬಿಟ್ಟ ಎತ್ತುಗಳು ಊರಿನ ಗಡಿ ದಾಟಿದರೆ ಮುಂದಿನ ವರ್ಷ ಈ ಆಚರಣೆ ನಡೆಸುವುದಿಲ್ಲ ಎಂಬ ನಂಬಿಕೆ ಇರುವುದರಿಂದ, ಎತ್ತುಗಳು ಊರು ದಾಟದಂತೆ ರೈತರು ವಿಶೇಷ ಎಚ್ಚರಿಕೆ ವಹಿಸುತ್ತಾರೆ. ಕರಿ ಹರಿದ ಬಳಿಕ ಗಂಡಸರಿಗೂ ಪಂದ್ಯಾವಳಿಗಳು ಇದ್ದು, ಅದರಲ್ಲೂ ವಿಶೇಷವಾಗಿ ಗುಂಡು ಎತ್ತುವ, ಇಲ್ಲವೇ ಮೂಟೆಗಳನ್ನು ಎತ್ತುವ ಸ್ಪರ್ಧೆಗಳನ್ನು ಏರ್ಪಡಿಸಲಾಗಿರುತ್ತದೆ.

ವರ್ಷವಿಡೀ ಕೃಷಿ ಚಟುವಟಿಕೆಯಲ್ಲಿ ತೊಡಗಿ ದೇಹವನ್ನು ಹುರಿಗೊಳಿಸಿಕೊಂಡ ರೈತರಿಗೆ ಇಂದೊಂದು ರೀತಿಯ ದೈಹಿಕ ಕಸರತ್ತಿನ ಚಟುವಟಿಕೆಗಳು ನಡೆದು ಅಲ್ಲಿ ಗೆದ್ದವರಿಗೆ ಪ್ರಶಸ್ತಿ ಪುರಸ್ಕಾರಗಳನ್ನು ಹಂಚಿದ ನಂತರ ಎಲ್ಲರು ತಮ್ಮ ಗ್ರಾಮ ದೇವತೆಯ ದೇವಾಲಯಕ್ಕೆ ಹೋಗಿ ಭಕ್ತಿಯಿಂದ ಈ ಬಾರಿ ಮಳೆ ಚೆನ್ನಾಗಿ ಆಗಿ ಬೆಳೆ ಸುಭಿಕ್ಷವಾಗುವಂತಾಗಲಿ ಎಂದು ಬೇಡಿಕೊಳ್ಳುತ್ತಾರೆ.

ಈ ಕಾರಹುಣ್ಣಿಮೆ ಮುಗಿದ ನಂತರವೇ ಮಳೆಗಾಲ ಆರಂಭವಾಗುವುದನ್ನು ನಮ್ಮ ವರಕವಿ ಬೇಂದ್ರೆಯವರೂ ಸಹಾ ತಮ್ಮ ಮೇಘದೂತ ಕವನದಲ್ಲಿ ವ್ಯಕ್ತಪಡಿಸುತ್ತ, ಆಗಲಿ ಇದ್ದರೂ ಆಸೆಗೊಂಡಿರಲು ಗಿರಿಯೊಳಂತೂ ಇತ್ತು ಕೆಲವೇ ತಿಂಗಳಲ್ಲಿ ಚಿನ್ನ ಕಡಗ ಮೊಳಕೈಗೆ ಸರಿದು ಬಂತು ಕಾರಹುಣ್ಣಿಮೆಯ ಮಾರನೆಯ ದಿನವೇ ಮೋಡ ಕೋಡನಪ್ಪಿ ಕಂಡಿತೊಡ್ಡಿ ನೋಡ ಡಿಕ್ಕಿಯಾಡುವಾ ಆನೆ ಬೇಡಗನೊಪ್ಪಿ ಎಂದು ಹೇಳಿತ್ತಾರೆ.

ರೈತರ ಹೆಗಲಿಗೆ ತಮ್ಮ ಹೆಗಲು ಕೊಟ್ಟು ರೈತನ ಜೀವನಕ್ಕಾಗಿ ತಮ್ಮ ಜೀವ ತೇಯುವ ಮೂಕ ಪ್ರಾಣಿಗಳಾದ ಎತ್ತುಗಳು ದೇವರು ಇದ್ದ ಹಾಗೆ. ಹಾಗಾಗಿ ಕಾರಹುಣ್ಣಿಮೆಯ ದಿನದಂದು ಅವುಗಳನ್ನು ಸಿಂಗರಿಸಿ, ಪೂಜೆ ಮಾಡಿ ಸಂಭ್ರಮಿಸುವ ಒಂದು ರೀತಿಯ ಜನಪದ ಸೊಗಡಿನ ಹಬ್ಬವೇ ಕಾರಹುಣ್ಣಿಮೆ ಎಂದರೂ ತಪ್ಪಾಗಲಾರದು.

ಹಳೇಮೈಸೂರಿನ ಕಡೆ ಸಂಕ್ರಾತಿಯ ದಿನ ಇದೇ ರೀತಿ ದನಗಳಿಗೆ ಸಿಂಗರಿಸಿ ಕಿಚ್ಚು ಹಾಯಿಸುವುದನ್ನೂ ಇಲ್ಲಿ ನೆನಪಿಸಿಕೊಳ್ಳಬಹುದಾಗಿದೆ. ಒಟ್ಟಿನಲ್ಲಿ ಆಚರಣೆಗಳು ಬೇರೆ ಬೇರೆ ದಿನಗಳಾದರೂ ಸಡಗರ ಸಂಭ್ರಮ ಮತ್ತು ಧ್ಯೇಯ ಒಂದೇ ಆಗಿರುತ್ತದೆ. ಈ ರೀತಿಯ ಹಬ್ಬಗಳು ವಿವಿಧತೆಯಲ್ಲಿ ಏಕತೆಯನ್ನು ಮೂಡಿಸಿ ಗ್ರಾಮ ಗ್ರಾಮಗಳಲ್ಲಿ ಸೌಹಾರ್ದತೆಯನ್ನು ಮೂಡಿಸುವುದರಲ್ಲಿ ಸಹಕಾರಿಯಾಗುತ್ತವೆ.

ಇತ್ತೀಚಿನ ದಿನಗಳಲ್ಲಿ ಎತ್ತುಗಳ ಬದಲಾಗಿ ಟ್ರ್ಯಾಕ್ಟರ್‌ಗಳು ಎಲ್ಲೆಡೆ ಹೇರಳವಾಗಿರುವುದರಿಂದ ಎತ್ತುಗಳೇ ಇಲ್ಲದೇ, ಈ ಕಾರಹುಣ್ಣಿಮೆಯನ್ನು ಹೇಗೆ ಆಚರಿಸುತ್ತಾರೆ ಎಂಬ ಜಿಜ್ಞಾಸೆ ಮೂಡಿದೆ. ಆದರೂ ಹಿರಿಯರು ಇಂತಹ ಪರಿಸ್ಥಿತಿಯನ್ನು ಅಂದೇ ಊಹಿಸಿ ಅದಕ್ಕೂ ಒಂದು ಪರಿಹಾರವನ್ನು ಸೂಚಿಸಿದ್ದಾರೆ. ಕಾರಹುಣ್ಣಿಮೆಗೂ ಮುಂಚೆ ಊರಿನ ಕುಂಬಾರರು ಊರ ಕೆರೆಯಿಂದ ಸಾಕಷ್ಟು ಜೇಡಿಮಣ್ಣನ್ನು ತಂದು ಅದನ್ನು ಹಸನುಮಾಡಿ ಅದರಿಂದ ಮುದ್ದಾದ ಎತ್ತುಗಳನ್ನು ಮಾಡಿ ಅವುಗಳನ್ನು ಚೆನ್ನಾಗಿ ಒಣಗಿಸಿಡುತ್ತಾರೆ. ಕೆಲವಡೆ ಅದಕ್ಕೆ ಬಣ್ಣಗಳಿಂದ ಸಿಂಗರಿಸಿವುದೂ ಉಂಟು.

ಹಬ್ಬದ ಹಿಂದಿನ ದಿನ ಊರಿನ ಮನೆಗಳಿಗೆ ಹೋಗಿ ಯಾರ ಮನೆಯಗಳಲ್ಲಿ ಎತ್ತುಗಳು ಇರುವುದಿಲ್ಲವೂ, ಅವರೆಲ್ಲರಿಗೂ ಮಣ್ಣೆತ್ತುಗಳ ಜೋಡಿಯನ್ನು ಕೊಡುವ ಸಂಪ್ರದಾಯವಿದೆ. ಈ ರೀತಿಯಾಗಿ ಪಡೆದ ಜೋಡೆತ್ತುಗಳಿಗೆ, ಮುಂಗಾರು ಮತ್ತು ಹಿಂಗಾರು ಎಂದು ಹೆಸರಿಟ್ಟು ಅವುಗಳನ್ನು ಭಕ್ತಿಯಿಂದ ಪೂಜೆ ಮಾಡಿ ಮಾರನೆಯ ದಿನ ನೀರಿನಲ್ಲಿ ವಿಸರ್ಜಿಸುತ್ತಾರೆ. ಮಣ್ಣೆತ್ತುಗಳನ್ನು ಮಾಡಿಕೊಟ್ಟ ಕುಂಬಾರರಿಗೆ ಹಿಂದೆಲ್ಲ ಯಥಾ ಶಕ್ತಿ ಧನ ಧಾನ್ಯಗಳನ್ನು ನೀಡುವ ಪದ್ದತಿ ಇತ್ತು. ಈಗ ಹಣವನ್ನೇ ನೀಡುತ್ತಾರೆ. ಈ ರೀತಿಯಾಗಿ ಗುಡಿ ಕೈಗಾರಿಕೆಗೂ ಒತ್ತು ನೀಡುವುದನ್ನು ಹಿಂದಿನವರು ಹಬ್ಬಗಳ ಮೂಲಕ ರೂಢಿಗೆ ತಂದಿರುವುದು ಗಮನಾರ್ಹವಾಗಿದೆ.

ಕಾರಹುಣ್ಣಿಮೆ ಮತ್ತು ನಾಗಪಂಚಮಿ ಹಬ್ಬಗಳಿಗೆ ಮಣ್ಣಿನ ಎತ್ತುಗಳು ಮತ್ತು ಮಣ್ಣಿನ ನಾಗಪ್ಪಗಳನ್ನು ಮಾಡುತ್ತಿದ್ದ ಕುಂಬಾರರಿಗೆ ಇತ್ತೀಚಿಗೆ ಬಂದಿರುವ ಪ್ಲಾಸ್ಟಿಕ್ ಗೊಂಬೆಗಳು ಅನಾನುಕೂಲವಾಗಿವೆಯಾದರೂ ಬಹಳಷ್ಟು ಮಂದಿ ಹಿರಿಯರು ಇಂದಿಗೂ ಮಣ್ಣಿನ ಗೊಂಬೆಗಳಿಗೆ ಒತ್ತು ನೀಡುತ್ತಿರುವುದು ಶ್ಲಾಘನೀಯ.

ಗಣಿನಾಡಿನ ವಿಪತ್ತು ನಿರ್ವಹಿಸುವರೇ ದೂರದ ಮುನಿಯಪ್ಪ?

ಮುನಿಯಪ್ಪ ಅವರ ಗಣಿನಾಡಿನ ಪ್ರವೇಶಕ್ಕೂ ಮೊದಲೇ ಸಾಕಷ್ಟು ಸವಾಲುಗಳು ಎದುರಾಗಿವೆ. ರೈತರ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆ, ರಸ್ತೆಗಳ ಸಮಸ್ಯೆ, ಬರ ನಿರ್ವಹಣೆ ಸೇರಿದಂತೆ ಹಲವು ಸಮಸ್ಯೆಗಳು ಎದುರು ನೋಡುತ್ತಿವೆ. ಇವುಗಳನ್ನೆಲ್ಲ ಅಚ್ಚುಕಟ್ಟಾಗಿ ನಿಭಾಯಿಸಿ ಮುನಿಯಪ್ಪ ಜನರ ಮನ್ನಣೆ ಗಳಿಸುವರೇ ಎನ್ನುವುದೇ ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ.



ಕೆಲ ದಿನಗಳ ಹಿಂದಷ್ಟೇ ಟೇಕಾಫ್ ಆಗಿರುವ ಡಿ ಕೆ ಶಿವಕುಮಾರ್ ಸರ್ಕಾರ ಈಗ ಸಚಿವರುಗಳ ಜವಾಬ್ದಾರಿ ಮಿತಿಯನ್ನು ಹೆಚ್ಚಿಸಿದೆ. ಸಿಎಂ ಡಿಕೆಶಿ ಜತೆಗೆ ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದ್ದ ಸಚಿವರ ಹೆಗಲಿಗೆ ಖಾತೆ ಜತೆಗೆ ವಿಕೋಪ ನಿರ್ವಹಣೆಯ ಉಸ್ತುವಾರಿ ಜವಾಬ್ದಾರಿಯನ್ನೂ ಹೊರಿಸಿದೆ. ರಾಜ್ಯದಲ್ಲಿನ ಮಳೆ, ಪ್ರವಾಹ ಸೇರಿದಂತೆ ನೈಸರ್ಗಿಕ ವಿಕೋಪಗಳ ಪರಿಣಾಮ ನಿರ್ವಹಣೆ ಹಾಗೂ ಮೇಲ್ವಿಚಾರಣೆಗಾಗಿ ಸಚಿವರಿಗೆ ಮತ್ತೊಂದು ಜವಾಬ್ದಾರಿ ಹೊರಿಸಲಾಗಿದೆ. ಸಚಿವ ಸಂಪುಟ ವಿಳಂಬ ಕಾರಣದಿಂದಾಗಿ ಒಬ್ಬೊಬ್ಬರಿಗೆ ಎರಡ್ಮೂರು ಜಿಲ್ಲೆಗಳ ಹೊಣೆ ನೀಡಲಾಗಿದೆ. ಆದರೆ ದೂರದೂರಿನ ಕೆ ಎಚ್ ಮುನಿಯಪ್ಪ ಅವರಿಗೆ ಗಣಿನಾಡು ರಕ್ಷಣೆಯ ಹೊಣೆ ಹೊರಿಸಿರುವುದು ಗಮನಾರ್ಹ ಸಂಗತಿಯಾಗಿದೆ.

ಹೌದು.. ಮುನಿಯಪ್ಪ ಅವರಿಗೆ ಮೂರು ಜಿಲ್ಲೆಗಳ ವಿಕೋಪ ನಿರ್ವಣೆಯ ಜವಾಬ್ದಾರಿ ವಹಿಸಲಾಗಿದೆ. ಬೆಂಗಳೂರು ಗ್ರಾಮಾಂತರ, ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳ ಜವಾಬ್ದಾರಿ ನೀಡಲಾಗಿದೆ. ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿರುವ ಮುನಿಯಪ್ಪ ಅವರಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವಿಪತ್ತು ನಿರ್ವಹಣೆ ಅಷ್ಟೇನೂ ಕಷ್ಟವಾಗಲಿಕ್ಕಿಲ್ಲ. ಸ್ಥಳೀಯರೇ ಆಗಿರುವುದರಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಮೇಲೆ ಹಿಡಿತವಿದೆ. ಆದರೆ ದೂರದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳು ಕಬ್ಬಿಣದ ಕಡಲೆಯಾಗಿ ಪರಿಣಮಿಸಬಹುದು. ಯಾಕೆಂದರೆ ಗಣಿ ಧೂಳನ್ನೇ ಹೊದ್ದು ಮಲಗಿರುವ ಎರಡೂ ಜಿಲ್ಲೆಗಳಲ್ಲಿ ಜಾಸ್ತಿ ಮಳೆ ಬಂದರೂ ಕಷ್ಟವೇ, ಮಳೆ ಬಾರದಿದ್ದರೂ ಸಮಸ್ಯೆಗಳೇ ಹೆಚ್ಚು. ಹೀಗಾಗಿ, ಮುನಿಯಪ್ಪ ಅವರಿಗೆ ಗಣಿನಾಡಿನ ನಿರ್ವಹಣೆ ಅಷ್ಟು ಸುಲಭವೇ ಎನ್ನುವ ಪ್ರಶ್ನೆಗಳು ಎದ್ದಿವೆ.

ಈಗಾಗಲೇ ಬಳ್ಳಾರಿ, ವಿಜಯನಗರ ಜಿಲ್ಲೆಗಳಲ್ಲಿ ಮುಂಗಾರು ನಿರಾಶೆ ಮೂಡಿಸಿದೆ. ಸಕಾಲಕ್ಕೆ ಮುಂಗಾರು ಎಂಟ್ರಿ ಕೊಟ್ಟಿದ್ದರೆ ಇಷ್ಟೊತ್ತಿಗಾಗಲೇ ಈ ನಾಡಿನ ಜನರ ಜೀವನಾಡಿ ತುಂಗಭದ್ರಾ ಜಲಾಶಯದ ಒಡಲಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ನೀರು ಸಂಗ್ರಹವಾಗಬೇಕಿತ್ತು. ಆದರೆ ಸರಿಯಾಗಿ ಮಳೆ ಬಾರದೇ ಇರುವುದರಿಂದ ನಿರೀಕ್ಷಿಸಿದಷ್ಟು ನೀರು ಹರಿದು ಬಂದಿಲ್ಲ. ಇದರಿಂದ ಮಳೆಯನ್ನೇ ನಂಬಿದ್ದ ರೈತರು ನಿರಾಶೆಗೊಂಡು ಈಗ ಡ್ಯಾಂ ನೀರಿನತ್ತ ಮುಖ ಮಾಡಿ ಕುಳಿತಿದ್ದಾರೆ. ಡ್ಯಾಂನಲ್ಲೇ ನೀರು ಸಂಗ್ರಹ ಆಗದಿದ್ದರೆ ಕಾಲುವೆಗಳಿಗೆ ನೀರು ಹರಿಸುವುದು ಕಷ್ಟ. ಇದು ಈಗಾಗಲೇ ರೈತರನ್ನು ಆತಂಕಕ್ಕೆ ತಳ್ಳಿದೆ.

ಮತ್ತೊಂದೆಡೆ, ಇಷ್ಟುದಿನ ಸುರಿಯದ ಮಳೆ ಇನ್ಮುಂದೆ ಹೆಚ್ಚಿನ ಪ್ರಮಾಣದಲ್ಲಿ ಬಂದರೆ ಸಮಸ್ಯೆಗಳ ಸರಮಾಲೆಯೇ ಸೃಷ್ಟಿಯಾಗಲಿದೆ. ಈಗಾಗಲೇ ಬೋರ್‌ವೆಲ್ ನೀರಿನಿಂದ ಬಿತ್ತನೆ ಮಾಡಿರುವ ಬೆಳೆಗಳಿಗೆ ಹಾನಿಯಾಗಬಹುದು. ಆಗ ರೈತರಿಗೆ ತುರ್ತು ಪರಿಹಾರ ವಿತರಿಸುವ ಸವಾಲುಗಳು ಸಚಿವರಿಗೆ ಎದುರಾಗಬಹುದು. ಇಂತಹ ಇನ್ನೂ ಅನೇಕ ಸಮಸ್ಯೆಗಳು ಸಚಿವರಿಗೆ ಕಾಡಬಹುದು. ಅವುಗಳನ್ನೆಲ್ಲ ಹೇಗೆ ನಿಭಾಯಿಸುತ್ತಾರೆ ಎನ್ನುವುದು ಯಕ್ಷಪ್ರಶ್ನೆಯಾಗಿದ್ದು, ದೂರದ ಮುನಿಯಪ್ಪ ಅವರಿಗೆ ಗಣಿನಾಡಿನ ಉಸ್ತುವಾರಿ ನೀಡಿರುವುದಕ್ಕೆ ಸ್ಥಳೀಯ ರೈತರು ಮತ್ತು ರೈತ ಮುಖಂಡರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಈ ಕುರಿತು ಪ್ರತಿಕ್ರಿಯೆ ನೀಡಿರುವ ಹಗರಿಬೊಮ್ಮನಹಳ್ಳಿ ತಾಲೂಕು ರೈತ ಸಂಘದ ಅಧ್ಯಕ್ಷ ಬಸನಗೌಡರ ಅವರು, ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, ''ಮುನಿಯಪ್ಪ ಅವರು ಬಳ್ಳಾರಿ, ವಿಜಯನಗರ ಜಿಲ್ಲೆಗೆ ಬಂದು ಹೋಗುವಷ್ಟರಲ್ಲೇ ಸಮಯ ಕಳೆದುಹೋಗುತ್ತದೆ. ವಿಜಯನಗರ ಜಿಲ್ಲೆಯ ಗಡಿಭಾಗದಲ್ಲಿರುವ ನಾವು ಜಿಲ್ಲಾ ಕೇಂದ್ರಕ್ಕೆ ಬರುವಷ್ಟರಲ್ಲೇ ಮಧ್ಯಾಹ್ನವಾಗಿರುತ್ತದೆ. ಅಂತಹ ಸಂದರ್ಭದಲ್ಲಿ ಸಚಿವರು ಭೇಟಿಗೆ ಸಿಗುವರೇ? ಅಲ್ಲದೇ ಇನ್ನೊಂದು ವಾರ ಕಳೆದರೆ ಹಗರಿಬೊಮ್ಮನಹಳ್ಳಿ ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಬೇಕು. ಈಗಾಗಲೇ ಬಿತ್ತಿದ ಬೆಳೆಗಳೆಲ್ಲವೂ ಒಣಗಿಹೋಗಿವೆ. ಕೆಲವರು ಬಿತ್ತನೆಗೆ ತಂದಿಟ್ಟಿದ್ದ ಬಿತ್ತನೆಬೀಜಗಳನ್ನು ಪುನಃ ಮಾರಾಟ ಮಾಡುವ ನಿರ್ಧಾರದಲ್ಲಿದ್ದಾರೆ. ಇಂತಹ ಸನ್ನಿವೇಶದಲ್ಲಿ ದೂರದ ಮುನಿಯಪ್ಪ ಅವರು ಹೇಗೆ ವಿಪತ್ತು ನಿರ್ವಹಣೆ ಮಾಡುತ್ತಾರೆ? ಅದಕ್ಕಾಗಿ ಸ್ಥಳೀಯ ನಾಯಕರಿಗೆ ಸಚಿವ ಸ್ಥಾನ ನೀಡಿ ಅವರನ್ನೇ ಉಸ್ತುವಾರಿ ಸಚಿವರನ್ನಾಗಿ ಮಾಡಬೇಕು'' ಎಂದು ಆಗ್ರಹಿಸಿದರು.

ಮತ್ತೊಂದೆಡೆ, ರೈತ ಸಂಘದ ರಾಜ್ಯಾಧ್ಯಕ್ಷ ಎಸ್ ಎ ಖಾದ್ರಿಯವರು ಪ್ರತಿಕ್ರಿಯೆ ನೀಡಿದ್ದು, ''ಮುನಿಯಪ್ಪ ಅವರಿಗೆ ಸುದೀರ್ಘವಾದ ರಾಜಕೀಯದ ಅನುಭವ ಇದೆ. ಈ ರಾಜ್ಯದ ಮುಖ್ಯಮಂತ್ರಿಯಾಗುವ ಅರ್ಹತೆ ಅವರಿಗಿದೆ. ಹೀಗಿರುವಾಗ ಮೂರು ಜಿಲ್ಲೆಗಳ ಉಸ್ತುವಾರಿ ನಿಭಾಯಿಸುವುದು ಮುನಿಯಪ್ಪ ಅವರಿಗೆ ಕಷ್ಟವೇನಲ್ಲ'' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸದ್ಯ ಮುನಿಯಪ್ಪ ಅವರ ಗಣಿನಾಡಿನ ಪ್ರವೇಶಕ್ಕೂ ಮೊದಲೇ ಸಾಕಷ್ಟು ಸವಾಲುಗಳು ಎದುರಾಗಿವೆ. ರೈತರ ಸಮಸ್ಯೆ, ಕುಡಿಯುವ ನೀರಿನ ಸಮಸ್ಯೆ, ರಸ್ತೆಗಳ ಸಮಸ್ಯೆ, ಬರ ನಿರ್ವಹಣೆ ಸೇರಿದಂತೆ ಹಲವು ಸಮಸ್ಯೆಗಳು ಎದುರು ನೋಡುತ್ತಿವೆ. ಇವುಗಳನ್ನೆಲ್ಲ ಅಚ್ಚುಕಟ್ಟಾಗಿ ನಿಭಾಯಿಸಿ ಮುನಿಯಪ್ಪ ಜನರ ಮನ್ನಣೆ ಗಳಿಸುವರೇ ಎನ್ನುವುದೇ ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR